

ಶ್ರೀಮಧ್ವಾಚಾರ್ಯರು



॥ ಶ್ರೀಅಶ್ವಿನೀಹಯಗ್ರೀವಾಯ ನಮಃ ॥
॥ ಶ್ರೀಮಧ್ವವಾದಿರಾಜೌ ವಿಜಯೇತೇ ॥




ಶ್ರೀವಾದಿರಾಜರು

ಶ್ರೀಮಧ್ವವಾದಿರಾಡ್ಹಂಸೌ ಗುರೂತ್ತಂಸೌ ಗತಾಂಹಸೌ ।
ಹೃದ್ಯಾನವದ್ಯವಿದ್ಯಾಂ ಮೇ ದದ್ಯಾಸ್ತಾಂ ಕರುಣಾನಿಧೀ ॥
ಯೋ ಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ ।
ಸ ಯಾತಿ ನಿಲಯಂ ಪುಣ್ಯಂ ಯದ್ಗತ್ವಾ ನ ನಿವರ್ತತೇ ॥

# ತತ್ವಮಲ್ಲಿಕಾ


**ಸಂಪುಟ–14 ಸಂಚಿಕೆ–3 ಶ್ರೀಶೋಭಕೃತ್ ಸಂವತ್ಸರ ಜುಲೈ–ಸೆಪ್ಟೆಂಬರ್ 2023**



ಪ್ರೇರಕರು
**ಪ್ರಾತಃಸ್ಮರಣೀಯ ಶ್ರೀಶ್ರೀವಿಶ್ವೋತ್ತಮತೀರ್ಥಶ್ರೀಪಾದಂಗಳವರು**



ಮಾರ್ಗದರ್ಶಕರು
**ಶ್ರೀಶ್ರೀವಿದ್ಯಾಸಾಗರತೀರ್ಥಶ್ರೀಪಾದಂಗಳವರು**



ಸಂಸ್ಥಾಪಕರು
**ಶ್ರೀಶ್ರೀವಿಶ್ವವಲ್ಲಭತೀರ್ಥಶ್ರೀಪಾದಂಗಳವರು**

**ಪ್ರಕಾಶಕರು**

ಶ್ರೀಭಾವಿಸಮೀರತತ್ವಪ್ರಸಾರಣಪ್ರತಿಷ್ಠಾನ
ಶ್ರೀಸೋದೆವಾದಿರಾಜಮಠ, ರಥಬೀದಿ, ಉಡುಪಿ. ದೂರವಾಣಿ : 0820–2524004

# ತತ್ವಮಲ್ಲಿಕಾ

ಸಂಪುಟ–14 ಸಂಚಿಕೆ–3

## ವಿಷಯಾನುಕ್ರಮಣಿಕೆ


| | |
|---|---|
| **ಸಂಪಾದಕೀಯ** | 1 |
| **ಶ್ರೀ ವಿಶ್ವೋತ್ತಮ ಉವಾಚ** | 3 |
| **ಶ್ರೀ ವಿಶ್ವವಲ್ಲಭ ಸಂದೇಶ** | 5 |
| **ಭಾಗವತಭಾವ – 51** ವಿ। ಹರಿಪ್ರಸಾದ ಭಟ್ | 7 |
| **ಶ್ರೀಪಾಂಡುರಂಗೋ ಭವತು ಪ್ರಸನ್ನಃ** – ಕುಂಭಾಸಿ ರಾಘವೇಂದ್ರ ಪುರಾಣಿಕ | 10 |
| **ಶ್ರೀಕೃಷ್ಣ ವಿಠಲರ ಜೀವನ** – ವಿ॥ ಉತ್ತನೂರು ಶ್ರೀನಿಧಿ ಆಚಾರ್ಯ | 16 |
| **ಸ್ವಪ್ನಪದ – 11** – ವಿ॥ ಕಡಗತ್ತೂರು ಪುರುಷೋತ್ತಮಾಚಾರ್ಯ | 19 |
| **ನಮ್ಮ ಸ್ವರೂಪೋದ್ಧಾರಕರಾದ ಗಂಗಾದರ್ಶಕರು** – ಸ್ವರ್ಣವರ್ಣದಾಸ | 24 |
| **ಶ್ರೀಮದ್ಭಾವಿಸಮೀರ ವಿರಚಿತ ಹರಿಭಕ್ತಿಲತಾ – 22** – ವಿ॥ ರವಿ ಬದರಿನಾಥ್ | 27 |
| **ಶ್ರೀಗುರುರಾಜಕೃತ ಪಾಷಂಡಮತಖಂಡನ** – ವಿ॥ ವಾದಿರಾಜಾಚಾರ್ಯ ಜಂಬುಖಂಡಿ | 29 |
| **ಶ್ರೀವಾದಿರಾಜವಿರಚಿತ ವಿರಾಡ್ರೂಪ ಧ್ಯಾನ** – ವಿ॥ ವರಹಾಹರಿ ವಿಠಲದಾಸರು | 32 |
| **ಶ್ರೀರಘುವರ್ಯತೀರ್ಥ ಸುಭಾಷಿತಮಂಡಲ** – ಡಾ. ಗುರುರಾಜ ಕೃ. ನಿಪ್ಪಾಣಿ | 35 |
| **ತ್ರೈಮಾಸದಲ್ಲಿ ಬರುವ ವಿಶೇಷ ದಿನಗಳು** | 37 |



### ಪ್ರಧಾನ ಸಂಪಾದಕರು
ಶ್ರೀ ಪಿ. ಶ್ರೀನಿವಾಸ ತಂತ್ರಿಗಳು, ಉಡುಪಿ

### ಸಂಪಾದಕರು
ಡಾ। ಗುರುರಾಜ ಕೃ. ನಿಪ್ಪಾಣಿ

### ಸಲಹಾಮಂಡಳಿ
ವಿ। ಆತ್ಮಕೂರು
ಆನಂದತೀರ್ಥಾಚಾರ್ಯ
ವಿ। ರಮೇಶ ಆಚಾರ್ಯ
ಬೆ. ನಾ. ವಿಜಯೀಂದ್ರ ಆಚಾರ್ಯ
ವಿ। ರಾಘವೇಂದ್ರ ಪುರಾಣಿಕ
ಶ್ರೀ ಬಿ. ಗೋಪಾಲಕೃಷ್ಣ ಉಪಾಧ್ಯಾಯ

### ವ್ಯವಸ್ಥಾಪಕ ಮಂಡಳಿ
ಶ್ರೀ ಗೋವಿಂದರಾವ್ ವಿ. ನವಲಗುಂದ
ಶ್ರೀ ಎ. ರಮೇಶ್ ಹತ್ವಾರ್



**ಚಂದಾ ವಿವರ**

| | |
|---|---|
| ಬಿಡಿ ಪ್ರತಿ | ರೂ. 15/– |
| ಪಂಚವಾರ್ಷಿಕ | ರೂ. 250/– |
| ಪೋಷಕರು | ರೂ. 1,000/– |
| ಮಹಾಪೋಷಕರು | ರೂ. 5,000/– |


ಲೇಖಕರ ಲೇಖನಗಳಲ್ಲಿಯ ವಿಷಯ ಮತ್ತು ವಿಮರ್ಶೆಗಳಿಗೆ ಲೇಖಕರೇ ಜವಾಬ್ದಾರರು.

**ಸಂಪಾದಕೀಯ**

## ಸರ್ವೇಶಸೇವಯಾ ಭೂಯಾನ್ಮಲಮಾಸೋ ಹ್ಯಭೀಷ್ಟದಃ

ಮೂರು ವರ್ಷಗಳಲ್ಲೊಮ್ಮೆ ಬರುವ ಅಧಿಕಮಾಸವು ವಿಶಿಷ್ಟವಾದದ್ದು. ಯಾವ ಚಾಂದ್ರಮಾಸದಲ್ಲಿ ಸಂಕ್ರಾಂತಿಯು ಸಂಭವಿಸುವುದಿಲ್ಲವೋ ಅದಕ್ಕೆ ಅಧಿಕಮಾಸ ಅಥವಾ ಮಲಮಾಸವೆಂದು ಕರೆಯಲಾಗುತ್ತದೆ.

**ಯಸ್ಮಿನ್ ಮಾಸಿ ನ ಸಂಕ್ರಾಂತಿಃ ---- ।**
**ಮಲಮಾಸಃ ಸ ವಿಜ್ಞೇಯಃ ಮಾಸಃ ಸ್ಯಾತ್ತು ತ್ರಯೋದಶಃ ॥**
**-----**
**ಚಾಂದ್ರೋ ಮಾಸೋ ಹ್ಯಸಂಕ್ರಾಂತಃ ಮಲಮಾಸಃ ಪ್ರಕೀರ್ತಿತಃ ॥**

ಇದು ಆ ಸಂವತ್ಸರದಲ್ಲಿ ಬರುವ ಹದಿಮೂರನೆಯ ಮಾಸವು. ಆ ಮಾಸಕ್ಕೆ ನಿಯಾಮಕ ಭಗವದ್ರೂಪ ಆನಂದಾಪತಿ ಪುರುಷೋತ್ತಮ. ಇದರಿಂದಾಗಿ ಇದಕ್ಕೆ ಪುರುಷೋತ್ತಮಮಾಸವೆಂದೂ ಕರೆಯಲಾಗುತ್ತದೆ. ಈ ಮಾಸವು ಅನೇಕ ಮಂಗಳಕಾರ್ಯಗಳಿಗೆ ಯೋಗ್ಯವಲ್ಲದ್ದರಿಂದ ಇದನ್ನು ಮಲಮಾಸವೆಂದೂ ಕರೆಯಲಾಗುತ್ತದೆ.

**ವ್ರತಾರಂಭಂ ಸಮಾಪ್ತಿಂ ಚ ಕಾಮ್ಯಕರ್ಮ ಚ ಪಾಪ್ಮನಾಮ್ ।**
**ಪ್ರಾಯಶ್ಚಿತ್ತಂ ಚ ಸರ್ವಸ್ಯ ಮಲಮಾಸೇ ವಿಸರ್ಜಯೇತ್ ॥**

ಹೊಸದಾಗಿ ವ್ರತಾದಿಗಳನ್ನು ಆಚರಿಸುವವರು, ಉದ್ಯಾಪನ, ವಿವಾಹ, ಉಪನಯನ, ಅನ್ನಪ್ರಾಶನ, ಚವಲ, ಗೃಹಪ್ರವೇಶ, ದೇವಾಲಯ ನಿರ್ಮಾಣ ಹಾಗೂ ಇತರ ಕಾಮ್ಯಕರ್ಮಗಳು ಮತ್ತು ಪಾಪ-ಪ್ರಾಯಶ್ಚಿತ್ತ ಕಾರ್ಯಗಳನ್ನೂ ಮಾಡಬಾರದು. ಇವುಗಳನ್ನು ಶುದ್ಧಮಾಸದಲ್ಲಿಯೇ ಮಾಡಬೇಕು. ವಾರ್ಷಿಕ ವ್ರತವಾಗಿ ಮೊದಲೇ ಆರಂಭಿಸಿದ್ದರೆ ಅದನ್ನು ಮುಂದುವರೆಸಬಹುದು. ಈ ಮಾಸದಲ್ಲಿ ಉಪೋಷಣ, ಏಕಭುಕ್ತ, ಧಾರಣಪಾರಣ, ದೀಪ, ಆರ್ತಿಕ್ಯ, ತುಲಸೀಪುಷ್ಪಸಮರ್ಪಣ, ವಿಶೇಷ ಪಠನ-ಪಾರಾಯಣ, ಬ್ರಾಹ್ಮಣಸುವಾಸಿನೀಸಂತರ್ಪಣ ಮೊದಲಾದ ವಿಷ್ಣುಪ್ರೀತಿಕರ ಸತ್ಕರ್ಮಗಳನ್ನು ಮಾಡುವುದು ವಿಶೇಷ ಫಲಪ್ರದ.

ಅಷ್ಟವಸು - ಏಕಾದಶರುದ್ರ - ದ್ವಾದಶಾದಿತ್ಯ - ಪ್ರಜಾಪತಿ - ವಷಟ್ಕಾರ ಅಂತರ್ಯಾಮಿ ಭಗವದ್‌ರೂಪಗಳನ್ನು ವಿಶೇಷ ಸ್ಮರಿಸಿ, ಆರಾಧಿಸಿ ಪೂಜೆ-ಸಮರ್ಪಣೆ ದಾನಾದಿಗಳನ್ನು ಮಾಡಬೇಕು.

ಈ ಅಧಿಕಮಾಸದಲ್ಲಿ ಅಪೂಪದಾನವು ವಿಶೇಷ.

**ಅಧಿಮಾಸೇ ತು ಸಂಪ್ರಾಪ್ತೇ ಗುಡಸರ್ಪಿಯುತಾನಿ ಚ ।**
**ತ್ರಯಸ್ತ್ರಿಂಶದಪೂಪಾನಿ ದಾತವ್ಯಾನಿ ದಿನೇ ದಿನೇ ॥**
**-----**
**ತ್ರಯಸ್ತ್ರಿಂಶದಪೂಪಾನ್ನಂ ಕಾಂಸ್ಯಪಾತ್ರೇ ನಿಧಾಯ ಚ ।**
**ಸಘೃತಂ ಸಹಿರಣ್ಯಂ ಚ ಬ್ರಾಹ್ಮಣಾಯ ನಿವೇದಯೇತ್ ॥**

ಅಧಿಕಮಾಸದಲ್ಲಿ ಬೆಲ್ಲ-ತುಪ್ಪದಿಂದ ಕೂಡಿದ ಮೂವತ್ತಮೂರು ಅಪೂಪಗಳನ್ನು ತುಪ್ಪ ಹಾಗು ಸುವರ್ಣದೊಂದಿಗೆ ಬ್ರಾಹ್ಮಣನಿಗೆ ದಾನ ಮಾಡಬೇಕು. ಆ ಸಂಖ್ಯಾಕ ಹಣ್ಣು ಮೊದಲಾದವುಗಳನ್ನೂ ದಾನ ಮಾಡಬಹುದು. ಈ ಮಾಸದಲ್ಲಿ ಕಾಮ್ಯಕರ್ಮ-ವ್ರತಾದಿಗಳಿಗೆ ನಿಷೇದವಿದ್ದರೂ ದೇವತಾರಾಧನೆ, ಬ್ರಾಹ್ಮಣಾರಾಧನೆಗಳನ್ನು ಯಥಾಕ್ರಮ ಮಾಡಿ ವಿಶೇಷ ಪುಣ್ಯಭಾಗಿಗಳಾಗಬಹುದು. ಈ ಅಭಿಪ್ರಾಯದಲ್ಲಿ ಇದನ್ನು ಪುರುಷೋತ್ತಮನ ಆರಾಧನೆಯ ಉತ್ತಮಮಾಸವೆಂದೂ ಹೇಳಬಹುದು. ಪ್ರಕೃತ ಬರುವ ಅಧಿಕ ಮಾಸದಲ್ಲಿ ಶ್ರೀಹರಿಪ್ರೀತಿಕರ ಸತ್ಕರ್ಮಗಳು ಹೆಚ್ಚಾಗಿ ನಡೆಯಲೆಂದು ಆಶಿಸಿ ಗುರ್ವಂತರ್ಯಾಮಿಯಲ್ಲಿ ವಿಶೇಷ ಪ್ರಾರ್ಥಿಸೋಣ.

## ಶ್ರೀಗುರುರಾಜ ವಿರಚಿತ ವೈಕುಂಠವರ್ಣನೆ

**– ಸ್ವರ್ಣವರ್ಣದಾಸ**

**ಎಲ್ಲವಿಲ್ಲೆಂಬುವನ ನಾಲಿಗೆಯೆ ಇಲ್ಲವಾಯಿ-**
**ತಲ್ಲ ಇನ್ನೆಂತು ನಮ್ಮ ಕೂಡೆ ನುಡಿವ**
**ಬಲ್ಲವರಿಗಿಂತು ಬೋಧಿಸಿ ಜಗತ್ತು ಸತ್ಯವೆಂದೂ**
**ನಿಲ್ಲಿಸಿದ ಮಧ್ವಮುನಿಗೆಣೆಗಾಣೆ ಇಂತಲ್ಲದೆ ಮಾಣೆ ಶ್ರೀಹರಿಯಾಣೆ**

ಎಲ್ಲವೂ ಸುಳ್ಳು ಎಂಬುವವನ ನಾಲಿಗೆ ಇಲ್ಲದಂತಾಯಿತು. ಇನ್ನೇನು ನಮ್ಮ ಕೂಡಿ ಮಾತನಾಡುವ. ಯೋಗ್ಯರಿಗೆ ಉಪದೇಶಿಸಿ ಜಗತ್ತು ಸತ್ಯವೆಂದು ಸ್ಥಾಪಿಸಿದ ಶ್ರೀಮಧ್ವರಾಯರಿಗೆ ಎಣೆಗಾಣೆ. ಹೀಗೆ ಸಾಧಿಸದೆ ಇರಲಾರೆ. ಇದು ಹರಿಯ ಮೇಲಾಣೆ.

## ಶ್ರೀವಿಶ್ವೋತ್ತಮ ಉವಾಚ

# ದೃಶ್ಯಃ ಸುರಾದ್ಯೈಃ ಇತರೈರದೃಶ್ಯಃ

ಶ್ವೇತದ್ವೀಪದಲೊಮ್ಮೆ ಸಸಂಭ್ರಮ ಉತ್ಸವ. ಲಾತವ್ಯ ಋಜುದೇವತೆಯ ಅವತಾರದ ಹಿನ್ನಲೆಯಾಗಿ ಆಯೋಜಿಸಿದ್ದು, ಆಂತರಿಕ ಕಲಿಬಾಧೆಯ ನಿಗ್ರಹಕ್ಕಾಗಿ ಋಜುದೇವತೆಯ ಅವತಾರ ಅವಶ್ಯವಾಗಿತ್ತು. ಈ ಸಂಗತಿಯನ್ನೇ ಶ್ರೀಜಗನ್ನಾಥದಾಸರು **'ಕಲಿಬಾಧೆಯು ವೆಗ್ಗಳವಾಯ್ತೆಂದು । ಇಳೆಗಿಳಿದೆ ಯತಿಕುಲತಿಲಕಕೃಪಾಳೋ ॥'** ಎಂದು ಕೊಂಡಾಡಿ ಸೂಚಿಸಿದ್ದಾರೆ. ಆ ಉತ್ಸವಸಂದರ್ಭದಲ್ಲಿ ಪದ್ಮನಾಭರೂಪಿ ಪರಮಾತ್ಮನು ಲಾತವ್ಯ ಋಜುದೇವತೆಗೆ ಅವತಾರಕ್ಕೆ ಅಪ್ಪಣೆಯಿತ್ತ. ಆಗ ಲಾತವ್ಯರು ಸಪ್ರಣಾಮ ಸವಿನಯ ಪ್ರಶ್ನಿಸಿದರು. 'ದೇವೋತ್ತಮನೇ! ಶ್ರೀವಾಯುದೇವರು ಹನುಮ–ಭೀಮ–ಮಧ್ವರೂಪಗಳಿಂದ ಅವತರಿಸಿದಾಗ ನೀನು ರಾಮ–ಕೃಷ್ಣ–ವೇದವ್ಯಾಸರೂಪಗಳಿಂದ ಅನುಗ್ರಹ ಮಾಡಿ ದುಷ್ಟಶಿಕ್ಷಣ–ಶಿಷ್ಟರಕ್ಷಣ ಕಾರ್ಯವನ್ನು ಸಾಧಿಸಿದ್ದೀಯಾ. ಪ್ರಕೃತ ಇದು ಕಲಿಯುಗ. ತ್ರಿಯುಗಹೂತಿಖ್ಯಾತಿಪಾತ್ರನಾದ ನಿನ್ನ ಅವತಾರವಿಲ್ಲ. ನನ್ನ ಅವತಾರವಾಗಲು ಯಾವ ಕ್ರಮದಿಂದ ಅನುಗ್ರಹೋನ್ಮುಖನಾಗುತ್ತೀಯಾ?' ಆಗ ಭಗವಂತನು ತನ್ನ ಹಯಗ್ರೀವರೂಪ ತೋರಿಸಿ, ಅರ್ಚಾರೂಪದಿಂದ ಒಲಿದು ಬಂದು ವಿಶೇಷ ಅನುಗ್ರಹ ಮಾಡುತ್ತೇನೆಂದು ಅರುಹಿ ಅಭಯವಿತ್ತನು. ನಂತರ ಬ್ರಹ್ಮ–ವಾಯು ಮೊದಲಾದ ದೇವತೆಗಳ ಸಮಕ್ಷಮದಲ್ಲಿ ಲಾತವ್ಯ ಋಜುದೇವತೆಗೆ ಪಟ್ಟಾಭಿಷೇಕವಾಯಿತು. ಲಾತವ್ಯರು ಭಗವದಾಜ್ಞೆಯನ್ನು ಶಿರಸಾವಹಿಸಿದರು. ಬ್ರಹ್ಮ ವಾಯುಗಳು ಲೋಕೋದ್ಧಾರ ಪ್ರಯೋಜಕ ಸ್ವವೈಭವವಿತ್ತರು.

**ಬ್ರಹ್ಮವಾಯೂ ಅಪಿ ತದಾ ಲಾತವ್ಯಾಯ ಸ್ವವೈಭವಮ್ ।**
**ದತ್ವಾ ಸರ್ವಾಧಿಕಾರಂ ತು ಲೋಕೋದ್ಧರಣಹೇತವೇ ॥**

– ವಾಮನಪುರಾಣ

**ಹಯಗ್ರೀವಾಜ್ಞಯಾ ವಾತವಿರಿಂಚೌ ಸ್ವೇ ಚ ವೈಭವಮ್ ।**
**ವಿನಾ ವಾಣೀಪತಿತ್ವಂ ಮೇ ದತ್ತವಂತೌ ಚ ಕಿಂ ವದೇ ॥**

– ಸ್ವಾ.ವೃಂ. ಆ.

ಹೂವಿನಕೆರೆಯಲ್ಲಿ ಲಾತವ್ಯರ ಅವತಾರ. ಸನ್ಯಸ್ತರಾಗಿ ಶ್ರೀವಾದಿರಾಜತೀರ್ಥ–ರಾದರು. ಶ್ರೀರಾಜರ ದಿಗ್ವಿಜಯಸಂಚಾರ ಆರಂಭ. ಒಂದೆಡೆ ದೈವಜ್ಞಕುಲೋತ್ಪನ್ನ

ವ್ಯಕ್ತಿ ವಿಘ್ನೇಶನ ವಿಗ್ರಹ ಮಾಡಲು ಮುಂದಾದ. ಎರಕ ಹಾಕಲು ಅದು ತಾನಾಗಿಯೇ ಹಯವದನ ಮೂರ್ತಿಯಾಯಿತು. ಆಶ್ಚರ್ಯಗೊಂಡ. ಪುನಃ ಕರಗಿಸಿ ಪ್ರಯತ್ನಿಸಿದ. ಪುನಃ ಅದೇ ರೂಪ ತಾಳಿತು. ತನಗೆ ಬೇಡಾದದ್ದೆಂದು ಒಂದೆಡೆ ಇಟ್ಟ. ಹಯವದನದೇವಸನ್ನಿಧಿ ತಾನಾಗಿಯೇ ಜಾಗೃತವಾಯಿತು. ಸನ್ನಿಧಿದ್ಯೋತಕ ಉಷ್ಣತೆ ಹೆಚ್ಚಾಯಿತು. ಮುಟ್ಟಲಾಗಲಿಲ್ಲ. ಆತನಿಗೆ ಏನೂ ತೋಚದಾಯಿತು. ರಾತ್ರಿ ಸ್ವಪ್ನ. ಸ್ವಪ್ನದಲ್ಲಿ ಮನೆಗೆ ತಾವಾಗಿಯೇ ಬರುವ ಯತಿಗಳಿಗೆ ಒಪ್ಪಿಸಲು ಸೂಚನೆ. ಶ್ರೀವಾದಿರಾಜರಿಗೂ ಸ್ವಪ್ನಾದೇಶ ಸೂಚನೆ. ಅದರಂತೆ ಶ್ರೀರಾಜರು ಆ ಮನೆಗೆ ಬಂದರು. ಆ ದೈವಜ್ಞ ನಮಸ್ಕರಿಸಿ ವೃತ್ತಾಂತ ವಿವರಿಸಿದ. ಶ್ರೀರಾಜರು ವ್ಯಾಪ್ತೋಪಾಸಕ ಋಜುದೇವತೆ. ವಿಗ್ರಹದ ಸನಿಹಕ್ಕೆ ಹೋಗಿ ನಮಸ್ಕರಿಸಿದರು. ದೇವ ಸನ್ನಿಧಿ ಕಂಡು ಸಂತಸಗೊಂಡರು. ಆ ದೈವಜ್ಞ ಬ್ರಾಹ್ಮಣನ ವಿನಮ್ರ ವಿನಂತಿಯಂತೆ ಪ್ರತಿಮೆ ಸ್ವೀಕರಿಸಿ ಪೂಜಿಸಿದರು. ಆ ಬ್ರಾಹ್ಮಣ ಮತ್ತು ಎಲ್ಲಾ ದೈವಜ್ಞಕುಲಜರಿಗೆ ವಿಷ್ಣುದೀಕ್ಷೆಯಿತ್ತು ಅನುಗ್ರಹಿಸಿದರು.

ಶ್ರೀರಾಜರಿಗೆ ಒಲಿದು ಬಂದ ವಿಗ್ರಹ ಅರ್ಚಾವತಾರ ರೂಪ. ಸಂಸ್ಥಾನಪೀಠದಲ್ಲಿ ಶ್ರೀಮಧ್ವಾಚಾರ್ಯಕರಾರ್ಚಿತ ಶ್ರೀಭೂವರಾಹದೇವನೊಂದಿಗೆ ಪೂಜಿತ. ಜಾಗೃತ ಸನ್ನಿಧಿ ದೇವೋತ್ತಮರಿಗೆ ಮಾತ್ರ ದೃಶ್ಯ, ಇತರರಿಗೆ ಅದೃಶ್ಯ. ಆದ್ದರಿಂದಲೇ ಅಪರೂಪ.

**ಶ್ರೀವಾದಿರಾಜರ ಮಾತಿನಲ್ಲಿ ಅವರ ಮಹಿಮೆ**

**ವಾದಿರಾಜಗೆ ದೇವ ಕಲಿಸಿದ**
**ಮಾಧವನ ಗುಣಮಾಲೆಯನು ಬರೆ**
**ದೋದಿ ಪಠಿಸುವ ಮಾನವರಿಗೆ**
**ವಿಮುಕ್ತಿ ಪಥವಹುದು ।**
**ವಾಚಶಕ್ತಿಯನಿತ್ತು ತನ್ನಯ**
**ಪಾದಪದ್ಮರ ನೆನೆಹನೀವ ಮ–**
**ಹಾದಯಾಂಬುಧಿ ಹಯವದನ ಕೃಪೆಯಿಂದ**
**ಸಲಹುವನು**

**– ಸ್ವಪ್ನಪದ**

## ಶ್ರೀವಿಶ್ವವಲ್ಲಭ ಸಂದೇಶ

# ಅನ್ಯತ್ರ ದೃಷ್ಟಿ ಹಾಯದಿರಲಿ

**'ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ'** ಎಂಬಂತೆ ಎಲ್ಲಾ ಇಂದ್ರಿಯಗಳಲ್ಲೂ ಅದರಲ್ಲೂ ಪಂಚಜ್ಞಾನೇಂದ್ರಿಯಗಳಲ್ಲಿ ನೇತ್ರವು ಬಹಳ ಪ್ರಧಾನವಾದದ್ದು. ಅದು ಒಳಿತಿನ ದೃಷ್ಟಿಯಾಗಿರಲಿ, ಕೆಡುಕಿನ ದೃಷ್ಟಿಯಾಗಿರಲಿ, ನೋಟವು ಚೆನ್ನಾಗಿದ್ದರೆ ಮಾತ್ರ ಬೇರೆಲ್ಲವೂ ಚೆನ್ನ. ನೋಟದಲ್ಲಿ ವಕ್ರತೆಯಿದ್ದರೆ ವ್ಯಕ್ತಿತ್ವದಲ್ಲೇ ವಕ್ರತೆಯಿದ್ದ ಹಾಗೆ.

ಲೋಕದಲ್ಲಿ ಅನೇಕ ವಿಧವಾದ ಪದಾರ್ಥಗಳಿವೆ. ಅದರಲ್ಲಿ ಒಳ್ಳೆಯ ಪದಾರ್ಥಗಳೂ ಇವೆ. ಕೆಟ್ಟ ಪದಾರ್ಥಗಳೂ ಇವೆ. ಮನುಷ್ಯನಿಗೆ ಯಾವುದೇ ಪದಾರ್ಥಗಳ ಬಗ್ಗೆ ಆಕರ್ಷಣೆ ಉಂಟಾಗಲು ಮೊದಲ ನೋಟ ಮುಖ್ಯ. ವಿಶೇಷವಾಗಿ ಕಲಿಯುಗದಲ್ಲಿ ಉತ್ತಮ ವಿಷಯಗಳು ದೃಷ್ಟಿಗೆ ಗೋಚರವಾಗುವುದಿಲ್ಲವೇನೋ! ಅನೇಕ ಬಾರಿ ಕೆಟ್ಟ ವಿಷಯಗಳ ಕುರಿತಾಗಿ ದೃಷ್ಟಿ ಹಾಯಿಸಿ ಕೇಡು ಮಾಡಿಕೊಂಡವರೇ ಅಧಿಕ.

ಕೆಲವೊಮ್ಮೆ ಕೆಟ್ಟ ವಿಷಯಗಳನ್ನು ಒಮ್ಮೆ ನೋಡೋಣ ಎಂದು ಕುತೂಹಲದಿಂದ ದೃಷ್ಟಿ ಹಾಯಿಸುತ್ತೇವೆ. ಆದರೆ, ಅದು ಬೆಂಕಿಯನ್ನು ನಂದಿಸಲು ತುಪ್ಪವನ್ನು ಸುರಿದಂತೆ. ಮತ್ತೆ ಮತ್ತೆ ನೋಡಬೇಕೆನಿಸುತ್ತದೆ. **'ನ ಜಾತು ಕಾಮಃ ಕಾಮಾನಾಂ ಉಪಭೋಗೇನ ಶಾಮ್ಯತಿ'** ಭೋಗದಿಂದ ಕಾಮದ ಹಸಿವೆಯನ್ನು ನೀಗಿಸಲು ಸಾಧ್ಯವಿಲ್ಲ. ಒಮ್ಮೆ ನೋಡೋಣವೆಂದು ನೋಡಲು, ಬಾರಿ ಬಾರಿ ನೋಡುವಂತೆ ಮಾಡುತ್ತದೆ. ಹೀಗಾಗಿ ಅಂತರಂಗದ ನಿಯಮನಕ್ಕೆ ಬಹಿರಂಗದ ಮೇಲೆ ನಿಯಂತ್ರಣವನ್ನು ಅವಶ್ಯವಾಗಿ ಮಾಡಬೇಕು. **'ನ ನಿಯೋಜಯ ಚಕ್ಷೂಂಷಿ ಪರದಾರಾದಿದರ್ಶನೇ'** ಎಂದು ನಮ್ಮ ಪರವಾಗಿ ಶ್ರೀಗುರುರಾಜರು ಪ್ರಾರ್ಥಿಸಿದ್ದಾರೆ. ಪರಸ್ತ್ರೀಯರ ಮೇಲಿನ ನೋಟ ಎಷ್ಟು ಅನರ್ಥಕಾರಿ ಎಂಬುವುದಕ್ಕೆ ಅನೇಕ ನಿದರ್ಶನಗಳು ಇತಿಹಾಸದಲ್ಲಿವೆ.

ರಾವಣ ಮೊದಲಾದ ದುಷ್ಟರು ಮಾತ್ರವಲ್ಲ, ವಾಲಿ, ಇಂದ್ರ ಮೊದಲಾದವರೂ ಪರಸ್ತ್ರೀಯರ ಮೇಲಿನ ವ್ಯಾಮೋಹದಿಂದ ಅನರ್ಥ ಸಂಪಾದಿಸಿದ್ದಾರೆ. ಇನ್ನು ಸಾಮಾನ್ಯ ಹುಲು ಮಾನವರಿಗೆ ಇನ್ನೇನು ಹೇಳಬೇಕು. ಶ್ರೀಗುರುರಾಜರು ಪರದಾರಾದಿ ಎಂದು ಆದಿ ಶಬ್ದವನ್ನು ಪ್ರಯೋಗಿಸಿದ್ದಾರೆ. ಕೇವಲ ಪರಸ್ತ್ರೀಯರ ನೋಟ ಮಾತ್ರ ಅನರ್ಥಕಾರಿಯಲ್ಲ. ಆದಿ ಪದದಿಂದ ನಮ್ಮ ಅಂತರಂಗದ ಸಾಧನೆಗೆ ಪ್ರತಿಕೂಲವಾಗುವ ಎಲ್ಲಾ ವಿಷಯಗಳಲ್ಲಿಯೂ ನಮ್ಮ ದೃಷ್ಟಿ ಹಾಯಬಾರದು. ನಮ್ಮ ನೋಟವನ್ನು ಅನ್ಯತ್ರ ಬೀರಿದರೆ ಅನರ್ಥ ಕಟ್ಟಿಟ್ಟ ಬುತ್ತಿ ಎಂಬುದು ಶ್ರೀಗುರುರಾಜರ ಹಾರ್ದ.

ಕಣ್ಣಿಗೆ ನೇತ್ರ ಎನ್ನುತ್ತಾರೆ. ನಮ್ಮನ್ನು **'ನಯತಿ'** ಕೊಂಡೊಯ್ಯುತ್ತದೆ. **'ತ್ರಾಯತಿ'** ಸಂಸಾರದಿಂದ ರಕ್ಷಿಸುತ್ತದೆ. ಈ ಅರ್ಥದಲ್ಲಿ ನೇತ್ರ ಸಾರ್ಥಕವೆನಿಸುತ್ತದೆ. ಭಾರತ–ಭಾಗವತ ಮೊದಲಾದವುಗಳನ್ನು ಈ ಕಣ್ಣಿನಿಂದ ನೋಡಿದರೆ ಅಶ್ವಮೇಧದ ಸುಕೃತ ನಮ್ಮ ಪಾಲಿಗಿದೆ. ಈ ಎಲ್ಲಾ ಹಿನ್ನೆಲೆಯನ್ನು ಅವಲೋಕಿಸುವಾಗ ನಮ್ಮ ದೃಷ್ಟಿ ಅನಿಷ್ಟ ನಿವೃತ್ತಿಗೆ ಸೋಪಾನವಾಗಬೇಕು. ನಮ್ಮ ದೃಷ್ಟಿಯನ್ನು ಪರಸ್ತ್ರೀಯರೇ ಮೊದಲಾದೆಡೆ ಹಾಯಿಸದೆ, ಸಚ್ಛಾಸ್ತ್ರವೇ ಮೊದಲಾದ ಅನೇಕ ಸದ್ವಿಚಾರಗಳ ಕಡೆ ಹಾಯಿಸಿ ಮುಕುತಿಗೆ ಸೋಪಾನವಾಗುವಂತೆ ಆ ನಮ್ಮ ದೃಷ್ಟಿಯನ್ನು ಸಾರ್ಥಕ ಪಡಿಸಿಕೊಳ್ಳಬೇಕು.

## ಗುಂಡಕ್ರಿಯೆ – 28

**– ಸ್ವರ್ಣವರ್ಣದಾಸ**

**ಆರು ಶಾಸ್ತ್ರಗಳ ಬಲ್ಲವರೆಲ್ಲ ಕೇಳಿರೋ**
**ನಾರಾಯಣನ ನಾರಿಯರಾದ ಧಾರುಣಿ**
**ಸಿರಿದೇವಿಯರಿವನ**
**ದೂರಿದಾಗಲೆ ನಿನಗೆ ದೂರವಾಗಲು ಕಾಲ–**
**ನೂರಲು ನೆಲವ ಕಾಣೆ**
**ಬಾರದು ಬಾಯಿಗೆ ಕೂಳು ಇವೆಲ್ಲವು**
**ಆರೇನೆಂಬರು ಕೇಳೈಯ**
**ಊರೊಳಗಿನ ಪತಿವ್ರತೆಯರಿರವ ಕಂಡು**
**ಸಾರ ಹೃದಯರೆಲ್ಲ ಹಯವದನನ ಪಾದ**
**ಸರೋಜವನೆ ಸಾರಿರೋ**

ಷಟ್‌ಶಾಸ್ತ್ರಗಳನ್ನು ಬಲ್ಲವರು ಕೇಳಿರಯ್ಯ ನಾರಾಯಣನ ನಿತ್ಯಭಾರ್ಯರಾದ ಶ್ರೀಭೂದೇವಿಯವರನ್ನು ದೂರಲು, ಅವರು ಜೀವನನ್ನು ಕೈಬಿಟ್ಟಾಗ ನಿಲ್ಲಲು ನೆಲೆ ಇಲ್ಲದೆ ತಿನ್ನಲು ತುತ್ತು ಸಹ ಸಿಗದು. ಇದಕ್ಕೆಲ್ಲ ಏನು ಕಾರಣ ಯಾರು ಹೇಳಬಲ್ಲರು. ಪತಿವ್ರತೆಯರು ಸ್ವಪತಿಯನ್ನು ಆಶ್ರಯಿಸಿ ಸುಖಶಾಂತಿಗಳನ್ನು ಕಂಡುಕೊಂಡಂತೆ, ಸಹೃದಯ ಸಜ್ಜನರೆಲ್ಲರು ಹಯವದನನ ಪಾದಪದ್ಮವನ್ನು ಆಶ್ರಯಿಸಿ ಎಂದು ಹೇಳಿರೋ.

# ಭಾಗವತಭಾವ – 51

**ವಿ|| ಎಚ್. ಹರಿಪ್ರಸಾದ್ ಭಟ್**
ಸಹಾಯಕ ಪ್ರಾಧ್ಯಾಪಕರು, ಎಂ.ಐ.ಎ.ಎಮ್.ಎಸ್. ಮಣಿಪಾಲ
9741627155

ರಾಜನು ಅಂತಹ ಕಟುಮಾತನ್ನಾಡಿದರೂ ಭರತನು ಒಂದೂ ಮರುತ್ತರವನ್ನು ಕೊಡಲಿಲ್ಲ. ಭರತನಿಗೆ ತಿಳಿದಿತ್ತು, ರಾಜನ ಬೈಗುಳದ ಮಾತಾವುದೂ ತನಗಲ್ಲವೆಂದು. ಈ ಶರೀರವನ್ನು ಕುರಿತು ರಾಜನು ಬೈಯುತ್ತಿದ್ದರೆ..... ಈ ಶರೀರದ ಸ್ವಾಮ್ಯವು ನನ್ನಲ್ಲಿಲ್ಲವಲ್ಲ! ಈ ಶರೀರವನ್ನು ಆ ಶ್ರೀಹರಿ ತಂದವ, ತಾನು ಅವನಿಚ್ಛೆಯಂತೆ ಬಂದವ. ಆದ್ದರಿಂದ, ನಿಂದೆ ಅಥವಾ ಪ್ರಶಂಸೆಗೆ ತಾನು ಅದೆಂತು ಅಧಿಕಾರಿಯಾದೇನೆಂಬ ಉನ್ನತ ಪ್ರಜ್ಞೆ ಭರತನದ್ದಾಗಿತ್ತು. ಭರತನು ಅದೆಂತಹ ಮನಃಸ್ಥಿತಿಯವನಾಗಿದ್ದನೆಂದರೆ, 'ನಾನು' 'ನನ್ನದು' ಎಂಬ ಅಹಂಭಾವವನ್ನು ಶಾಶ್ವತವಾಗಿ ಕರಗಿಸಿ ಪರಬ್ರಹ್ಮನನ್ನು ತನ್ನ ಹೃದಯದಲ್ಲಿ ಕುಳ್ಳಿರಿಸಿದವನಾಗಿದ್ದ.

ಸರಿ... ರಾಜನ ಪಲ್ಲಕ್ಕಿ ಮುಂದೆ ಸಾಗುತ್ತಿದೆ. ಬೋಯಿಗಳು ರಾಜನಿಗೆ ಹೆದರಿ ಜಾಗರೂಕರಾಗಿ ಹೆಜ್ಜೆಯಿಡುತ್ತಿದ್ದಾರೆ. ಜಾಗ್ರತೆಯಿಂದ ಹೆಜ್ಜೆಯಿಡಬೇಕಾದವನ ನಿರ್ಲಕ್ಷ್ಯ ಈಗಲೂ ಮುಂದುವರಿದಿದೆ. ಪಲ್ಲಕ್ಕಿಯು ಮತ್ತೆ ಓಲಾಡಲು ಶುರುವಾಯಿತು. ರಾಜನಿಗೆ ಎಲ್ಲಿಲ್ಲದ ಸಿಟ್ಟು ಬಂತು. ಸಿಟ್ಟಿನಿಂದ ರಾಜನಂದ,

**ಕಿಮಿದಮರೇ ತ್ವಂ ಜೀವನ್ಮೃತೋ ಮಾಂ ಕದರ್ಥೀಕೃತ್ಯ**
**ಭರ್ತೃಶಾಸನಮತಿಚರಸಿ ಪ್ರಮತ್ತಸ್ಯ ಚ ತೇ**
**ಕರೋಮಿ ಚಿಕಿತ್ಸಾಂ ದಂಡಪಾಣಿರಿವ ಜನತಾಯಾಃ**
**ಯಥಾ ಪ್ರಕೃತಿಂ ಸ್ವಾಂ ಭವಿಷ್ಯಸ ಇತಿ ॥**

'ಎಲವೋ ಮೂರ್ಖ! ಇದೇನಿದು? ಜೀವಂತನಾಗಿದ್ದೀಯೋ... ಸ್ವಯಂ ತಪ್ಪಿದೆಯೋ? ನನಗನುಚಿತವಾಗಿ ವರ್ತಿಸಿ ನನ್ನ ಮಾತನ್ನು ಮೀರಿ ನಡೆದಿದ್ದೀಯ. ಯಮನು ಅಪರಾಧ ಮಾಡಿದ ಜೀವಿಗೆ ಶಿಕ್ಷೆಯನ್ನು ನೀಡುವಂತೆ, ಅಹಂಕಾರಿಯಾದ ನಿನಗೂ ಶಿಕ್ಷೆಯನ್ನು ಕೊಟ್ಟು ತಕ್ಕ ಶಾಸ್ತಿಯನ್ನು ಮಾಡುತ್ತೇನೆ. ಹಾಗಾದಾಗಲೇ ನಿನ್ನ ಬುದ್ಧಿಯು ಸರಿಯಾದೀತು'

ಹೀಗೆ..... ರಾಜನ ಮಾತು ಬಹು ಬಿರುಸಾದಾಗ ಬ್ರಾಹ್ಮಣೋತ್ತಮನಾದ ಭರತ ಮೆಲ್ಲನೆ ಮಾತು ಪ್ರಾರಂಭಿಸಿದ.

**ತ್ವಯೋದಿತಂ ವ್ಯಕ್ತಮವಿಪ್ರಲಬ್ಧಂ**
**ಭರ್ತುಃ ಸ ಮೇ ಸ್ಯಾದ್ಯದಿ ವೀರ ಭಾರಃ ।**
**ಗಂತುರ್ಯದಿಸ್ಯಾದಧಿಗಮ್ಯಮಧ್ವಾ**
**ಪೀವೇತಿ ಚಾಸೌ ನ ವಿದಾಂ ಪ್ರವಾದಃ ॥**

'ಹೇ ರಾಜನ್! ಸರಿಯಾದ ಮಾತಂದೆ. ಆದರೆ ನೀನಂದ ಮಾತೆಲ್ಲ ಒಪ್ಪಲಾಗದು. ಯಾಕೆ ಗೊತ್ತೇನು? ಹೊರೆಯ ಭಾರವು ನಿನ್ನನ್ನು ಬಾಗಿಸಿದೆಯೆಂದೆಯಲ್ಲಾ... ಭಾರ ಹೊತ್ತವನಿಗೆ ಈ ಮಾತನ್ನು ಹೇಳಯ್ಯ.. ನಾನೇನು ಭಾರವನ್ನು ಹೊತ್ತಿಲ್ಲ. ಇನ್ನು, ತುಂಬಾ ದೂರ ನಡೆದು ಪಾಪ ದಣಿವಾಗಿರಬೇಕೆಂದು ಹಂಗಿಸಿದೆಯಲ್ಲಾ.. ಗುರಿಯಿದ್ದು ನಡೆಯುವವನಿಗೆ ಈ ಮಾತನ್ನು ಹೇಳಯ್ಯ.... ನನಗೋ... ಬಂದ ದಾರಿಯೂ ಗೊತ್ತಿಲ್ಲ, ಮುಂದಿನ ದಾರಿಯೂ ಗೊತ್ತಿಲ್ಲ. ಹಾಗಿದ್ದಾಗ ನಿನ್ನ ಈ ಬಿಂಕದ ಮಾತು ಅದು ನನಗೆ ಅಲ್ಲವೇ ಅಲ್ಲ. ಇನ್ನೇನಂದೆ ನೀನು? ಅಯ್ಯೋ ಪಾಪ.... ನಿತ್ರಾಣ ಜೀವ.. ತುಂಬಾ ಕೃಶನಾಗಿದ್ದೀಯ ಅಂದೆಯಲ್ಲವೇ..... ಎಂತಹಾ ಬಾಲಿಶದ ಮಾತಯ್ಯ! ಕೃಶತ್ವ, ಕೃಷ್ಣತ್ವ, ಸ್ಥೂಲತ್ವ ಇವೆಲ್ಲವೂ ಶರೀರ ಸಂಬಂಧಿಗಳು. ಆತ್ಮಕ್ಕೆ ಇದಾವುದರ ಗಂಟೂ ಇಲ್ಲ, ನಂಟೂ ಇಲ್ಲ ಆದ್ದರಿಂದ ನೀನಾಡಿದ ಮಾತು ನನಗದು ನಾಟಲೇ ಇಲ್ಲ.'

**ಸ್ಥೌಲ್ಯಂ ಕಾರ್ಶ್ಯಂ ವ್ಯಾಧಯ ಆಧಯಶ್ಚ**
**ಕ್ಷುತ್ತೃಡ್ಭಯಂ ಕಲಿರಿಚ್ಛಾ ಜರಾ ಚ ।**
**ನಿದ್ರಾ ರತಿರ್ಮನ್ಯುರಹಂಮದಃ ಶುಚೋ**
**ದೇಹೇನ ಜಾತಸ್ಯ ಹಿ ಮೇ ನ ಸಂತಿ ॥**

'ತೋರ–ಸಪೂರ ಎಂಬುದಾಗಲೀ, ಮಾನಸಿಕ, ದೈಹಿಕ ಕಾಯಿಲೆಯಾಗಲೀ, ಹಸಿವು–ಬಾಯಾರಿಕೆಯ ಬಾಧೆಯಾಗಲೀ, ಭಯ–ಧೈರ್ಯಗಳಾಗಲೀ, ಇಚ್ಛೆ ಯಾಗಲೀ, ಮುಪ್ಪಾಗಲೀ, ನಿದ್ರಾ–ಮೈಥುನಗಳಾಗಲೀ, ದೈನ್ಯ–ಅಹಂಕಾರಗಳಾಗಲೀ, ಮದ–ದುಃಖಗಳಾಗಲೀ ಇವೆಲ್ಲವೂ ದೇಹದಿಂದ ಬಂಧಿಯಾದವನಿಗೆ ಹೊರತು ನನಗಲ್ಲ!'

**ಜೀವನ್ಮೃತತ್ವಂ ನಿಯಮೇನ ರಾಜನ್**
**ಆದ್ಯಂತವದ್ಯದ್ವಿಕೃತಸ್ಯ ದೃಷ್ಟಮ್ ।**
**ಸ್ವಸ್ವಾಮ್ಯಭಾವೋ ಧ್ರುವ ಈಡ್ಯ ಯತ್ರ**
**ತರ್ಹ್ಯುಚ್ಯತೇಽಸೌ ವಿಧಿಕೃತ್ಯಯೋಗಃ ॥**

‘ ಬದುಕಿದ್ದೂ ಸತ್ತವನಂತೆ ಇರುವೆಯಲ್ಲಾ ಎಂಬುದಾಗಿ ಹಲುಬಿದೆಯಲ್ಲವೇ? ಹೇ ರಾಜನ್! ... ನೆನಪಿಟ್ಟುಕೋ.. ಹುಟ್ಟು, ಸಾವು ನನಗೊಬ್ಬನಿಗೆ ಸಂಬಂಧಿಸಿದ ಸಂಗತಿಯಲ್ಲ. ವಿಕಾರಹೊಂದುವ ಸರ್ವ ಪದಾರ್ಥಗಳಿಗೂ ಮೊದಲಿದೆ ಹಾಗೂ ಕೊನೆಯಿದೆ. (ನೀನೂ ಸಾಯುವುದಕ್ಕಾಗಿ ಬದುಕುತ್ತಿರುವೆಯೆಂಬುದು ಭರತನ ಭಾವ) ಮುಖ್ಯವಾದ ವಿಷಯವನ್ನು ಮಾತನಾಡುವ, ಏನಂದೆ ನೀನು..... ನೀನು ಆಜ್ಞೆಯನ್ನು ಹೊರಡಿಸುವವ. ನಾನದನ್ನು ಸ್ವೀಕರಿಸುವವ. ನೀನು ಸ್ವಾಮಿ. ನಾನು ದಾಸ. ನೀನು ಹೇಳುವವ. ನಾನು ಕೇಳುವವ. ಇದಲ್ಲವೇ ನಿನ್ನ ಅಹಂಕಾರಕ್ಕೆ ಮೂಲ ಕಾರಣ. ಹೇ ರಾಜನ್!... ಈ ತಲೆಹಿಡುಕ ಬುದ್ಧಿಯನ್ನು ಮೊದಲು ಬಿಡು. ಯಾಕೆಂದರೆ, ಈ ಸ್ವಾಮಿ–ಸೇವಕ ಸಂಬಂಧ ಯಾವತ್ತೂ ಶಾಶ್ವತವಲ್ಲ. ಇಂದಿನ ಸೇವಕ ನಾಳೆ ಮಾಲಿಕನಾಗಬಹುದು. ಇಂದಿನ ಮಾಲಿಕ ನಾಳೆ ಕೂಲಿಕಾರ್ಮಿಕನಾಗಬಹುದು. ಆಡುವ ಮಾತಿನ ಮುನ್ನ ಎಚ್ಚರವಿರಲಿ.’

ಭರತನ ಮಾತು ಮುಂದುವರಿಯುತ್ತಿದೆ. ಅದರೊಂದಿಗೆ ರಹೂಗಣ ರಾಜನ ಅಂತರಂಗದ ಕಣ್ಣಿಗೆ ಕಟ್ಟಿದ ಕಣ್ಪಟ್ಟಿಯೂ ಕಳಚುತ್ತಿದೆ. ಬಡ ಬ್ರಾಹ್ಮಣನ ವಿಶ್ವರೂಪದರ್ಶನವಾಗುತ್ತಿದೆ.

(ಮುಂದುವರಿಯುವುದು)

## ದೃಷ್ಟಾಂತತೀರ್ಥ ಶ್ರೀಶ್ರೀ ದೇವೇಂದ್ರತೀರ್ಥರು

ಬರಿಗೈಗಿಂತ ಹಿತ್ತಾಳೆಯ ಕಡಗ ಲೇಸು ಉಪನಿಷತ್ತುಗಳಲ್ಲಿ ಬಹು ಪ್ರಮೇಯಗಳಿವೆ. ಉಪನಿಷತ್ತು ಬಂಗಾರದ ಕಡಗದಂತೆ. ಶ್ರೀಮದಾಚಾರ್ಯರ ಗ್ರಂಥಗಳು ಈ ಬಂಗಾರದ ಕಡಗದಲ್ಲಿ ಹೂಳಿರುವ ರತ್ನಗಳಿಂದ ನಿರ್ಮಿತವಾದ ನವರತ್ನ ಕಡಗದಂತೆ. ಷೋಡಶೀ, ಚತುರ್ದಶೀ ಮೊದಲಾದ ಗ್ರಂಥಗಳು ಬೆಳ್ಳಿಯ ಕಡಗದಂತೆ. ಬಂಗಾರ–ಬೆಳ್ಳಿಗಳು ಇಲ್ಲದ ಬಡವರು ಹಿತ್ತಾಳೆ ಕಡಗ ಧರಿಸುತ್ತಾರಷ್ಟೆ. ಹಾಗೆ ಏನೂ ಇಲ್ಲದೆ ಇರುವುದಕ್ಕಿಂತ ಇಷ್ಟನ್ನಾದರೂ ತಿಳಿದುಕೊಳ್ಳಲಿ ಎಂದು ದಾಸರಾಯರು ರಚಿಸಿರುವ ಕೃತಿಗಳು ಹಿತ್ತಾಳೆ ಕಡಗದಂತೆ. ಅಷ್ಟಕ್ಕೇ ಹಿಗ್ಗದೆ ನವರತ್ನದ ಕಡಗ ಸಂಪಾದಿಸಲು ಯತ್ನಿಸಬೇಕು.

ಮುಖಪುಟ ಲೇಖನ

# ಶ್ರೀಪಾಂಡುರಂಗೋ ಭವತು ಪ್ರಸನ್ನಃ

**– ಕೆ. ರಾಘವೇಂದ್ರ ಪುರಾಣಿಕ**

ಭಗವಂತ ಕೃಷ್ಣನಾಗಿ ಅವತರಿಸಿದಾಗಲೇ ಪಾಂಡುರಂಗನಾಗಿ, ಪಾಂಡುರಂಗ ವಿಟ್ಠಲನಾಗಿ ಮತ್ತೊಂದು ರೂಪದಿಂದ ನೆಲೆನಿಂತ ಕ್ಷೇತ್ರ ಫಂಡರಾಪುರ. ದ್ವಾಪರಾಯಗಕ್ಕೆ ಸಂಬಂಧಿಸಿದ ಕ್ಷೇತ್ರವಾಗಿರುವ ಫಂಡರಾಪುರದ ಮಹಿಮೆ ಸ್ಕಾಂದ ಪುರಾಣದಲ್ಲಿ ಬಂದಿದೆ. ಪಾದ್ಮ ಪುರಾಣದಲ್ಲಿಯೂ ಈ ಕ್ಷೇತ್ರದ ಮಹಿಮೆ ಕಾಣಸಿಗುತ್ತದೆ. ಪುಂಡರೀಕ ಎಂಬ ಭಕ್ತನ ನಿರ್ವ್ಯಾಜಭಕ್ತಿಗೆ ಮೆಚ್ಚಿದ ಪುಂಡರೀಕಕ್ಷೇತ್ರ ಎಂದೂ ಪ್ರಸಿದ್ಧವಾಗಿದೆ.

ವಿಟ್ಠಲ ಎಂಬ ಪದದ ಪ್ರಯೋಗ ಸಂಪ್ರದಾಯ ಪದ್ಧತಿಯಲ್ಲೇ ಕಂಡುಬರುತ್ತದೆ. **ಶ್ರೀವಿಟ್ಠಲಂ ವಾಮನಯೋಗಿನೋಪಿ, ಅಧೋಕ್ಷಜಯೋಗಿನಃ ಪುನಃ ಶ್ರೀವಿಟ್ಠಲಂ ---** ಎಂಬುದಾಗಿ ಶ್ರೀಮದಾಚಾರ್ಯರೇ ತನ್ನ ಮೂವರು ಶಿಷ್ಯರಿಗೆ ವಿಟ್ಠಲ ಪ್ರತಿಮೆಯನ್ನು ಉಪಾಸನೆಗಾಗಿ ಕೊಟ್ಟಿರುವರು. ಹಿಂದೆ ಆ ಪ್ರತಿಮೆಗಳನ್ನು ವಾಮನವಿಟ್ಠಲ, ಉಪೇಂದ್ರ ವಿಟ್ಠಲ (ಉ ವಿಟ್ಠಲ) ಹಾಗೂ ಅಧೋಕ್ಷಜ ವಿಟ್ಠಲ (ಅಜ ವಿಟ್ಠಲ) ಎಂಬುದಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಗುರುತಿಸಿ ಹೇಳುವ ಪರಿಪಾಠವಿತ್ತು. ಈಗ ಈ ಹೆಸರುಗಳು ಹೋಗಿ ಬೇರೆ ಬೇರೆ ಹೆಸರು ಕೇಳಿಬರುತ್ತಿವೆ. ಶ್ರೀಮದಾಚಾರ್ಯರು ನೀಡಿದ ಪ್ರತಿಮೆಗಳು ಯುಗಾಂತರೀಯ ಪ್ರತಿಮೆಗಳಾಗಿರುವುದರಿಂದ ವಿಟ್ಠಲ ಎಂಬ ಹೆಸರು, ಪ್ರತಿಮೆಗಳು ಯಾವುದೂ ಅರ್ವಾಚೀನ ಅಲ್ಲ ಎನ್ನುವುದು ಸ್ಪಷ್ಟ.

ಅಲ್ಲದೇ ಶ್ರೀಗುರುರಾಜರು ತಮ್ಮ ಅವತಾರ ಸಮಯದಲ್ಲಿ ವಾಲಿಭಂಡಾರದಿಂದ ಹೊರ ತೆಗೆದು ಸ್ವೀಕರಿಸಿದ, ಬ್ರಹ್ಮಕರಾರ್ಚಿತವಾದ, ವಾಲಿಪೂಜಿತವಾದ ಪ್ರತಿಮೆಯೂ ವಿಟ್ಠಲಪ್ರತಿಮೆ. ಇದೂ ಸಹ ಯುಗಾಂತರದ ಪ್ರತಿಮೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಲಿಯುಗದ ಆರಂಭದಲ್ಲಿಯೂ ಗೌತಮ ಋಷಿಗಳು ಪೂಜಿಸಿದ್ದು ವಿಟ್ಠಲ ಪ್ರತೀಕವನ್ನೇ. ಆ ಪ್ರತಿಮೆ ಇಂದಿಗೂ ಸೋದೆಮಠದಲ್ಲಿ ಪೂಜೆಗೊಳ್ಳುತ್ತಿದೆ. ಈ ಇತಿಹಾಸವನ್ನೊಮ್ಮೆ ಅವಲೋಕಿಸಿದಾಗ ವಿಟ್ಠಲ ಅಪರಿಚಿತಚರ ಎನ್ನುವುದು ತಪ್ಪಾಗುತ್ತದೆ. ಈ ಸಂದರ್ಭದಲ್ಲಿ ಶ್ರೀಗುರುರಾಜರ ಕೊಡುಗೆಯನ್ನು ಹೇಳಲೇಬೇಕು. ವಿಟ್ಠಲ ಪದದ ನಿರ್ವಚನವನ್ನು ಪ್ರಾಯಃ ಐದಂ ಪ್ರಾಥಮ್ಯೇನ ನೀಡಿದ್ದೇ ಶ್ರೀಗುರುರಾಜರು. ಗುರುರಾಜರ ಹೆಸರನ್ನೂ ಹೇಳಲು ಮನಸ್ಸಿಲ್ಲದ ಪಂಡಿತರೂ ವಿಟ್ಠಲ

ಪದದ ನಿರ್ವಚನದ ಬಗ್ಗೆ ಹೇಳುವ ಸಂದರ್ಭ ಬಂದಾಗ ಮನಸ್ಸಿಲ್ಲದ ಮನಸ್ಸಿನಿಂದ, ಅನಿವಾರ್ಯವಾಗಿ ಅದನ್ನೇ ಹೇಳಬೇಕಾದ ಪರಿಸ್ಥಿತಿಯನ್ನು ಕಾಣುವಂತಾಗಿದೆ. ಆ ವ್ಯುತ್ಪತ್ತಿಯನ್ನು ನಿರಾಕರಿಸುವ ಪ್ರವೃತ್ತಿಯೂ ಕೆಲವರಲ್ಲಿ ಕಂಡುಬರುವುದು ಬಹಳ ಆಶ್ಚರ್ಯವನ್ನೇ ಉಂಟುಮಾಡುತ್ತದೆ. ಯಾಕೆಂದರೆ ಶ್ರೀಗುರುರಾಜರು ತೋರಿಸಿದ ನಿರ್ವಚನ ಸ್ವೋಪಜ್ಞ ಅಲ್ಲ. ಪಂಡಿತಪರಂಪರೆಯಲ್ಲಿ ಅನೂಚಾನವಾಗಿ ಬಂದಿರುವ ವ್ಯುತ್ಪತ್ತಿಯನ್ನೇ ಶ್ರೀಗುರುರಾಜರು ಲೋಕಕ್ಕೆ ಪ್ರಕಾಶಗೊಳಿಸಿದ್ದು. **ಇತಿ ವಿಟ್ಠಲಶಬ್ದಾರ್ಥಂ ವದಂತಿ ಭುವಿ ಪಂಡಿತಾಃ** ಎಂಬ ಅವರ ಮಾತಿನಿಂದ ಮೇಲಿನ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಈ ನಿರ್ವಚನ ಕೋಶಕಾರರಿಗೂ ಸಿಗದೇ ಇರುವುದು ಅಚ್ಚರಿಯೇ. ಹಾಗಾಗಿ ಕೋಶಗಳಲ್ಲಿಯೂ ಈ ಪದ ಕಾಣಸಿಗುವುದಿಲ್ಲ.

**ವಿದಾ ಜ್ಞಾನೇನ ತಾನ್ ಶೂನ್ಯಾನ್ ಲಾತಿ ಗೃಹ್ಣಾತಿ ವಿಟ್ಠಲಃ** – ಇದು ಶ್ರೀಗುರುರಾಜರು ತೋರಿಸಿದ ನಿರ್ವಚನ. ಜ್ಞಾನಶೂನ್ಯರಾದ ಯೋಗ್ಯತೆಯುಳ್ಳ ಭಕ್ತರಿಗೆ ಜ್ಞಾನವನ್ನು ಕರುಣಿಸಿ ತನ್ನವರನ್ನಾಗಿ ಸ್ವೀಕರಿಸುವ ಭಗವಂತ ವಿಟ್ಠಲ ಎಂದೆನಿಸಿದ್ದಾನೆ. **ಅಜ್ಞಾನಾಂ ಜ್ಞಾನದೋ ವಿಷ್ಣುಃ** ಎಂಬಂತೆ ಭಗವಂತನೇ ಜ್ಞಾನವನ್ನು ಕರುಣಿಸಿ ಅಂತತಃ ಅನುಗ್ರಹಿಸುವವನು.

**ಅಕ್ಷರಸಾಮ್ಯಾತ್ ನಿಬ್ರೂಯಾತ್** ಎಂಬ ನಿಯಮವನ್ನು ಅಕ್ಷರಶಃ ಪಾಲಿಸಿ ತೋರಿಸಿದ ನಿರ್ವಚನ ಇದಾಗಿದೆ. ಕೆಲವರು ವಿಸ್ಥಲ ಎನ್ನುವುದೇ ಮುಂದೆ ವಿಟ್ಠಲ ಎಂದಾಯಿತು ಎಂದು ಹೇಳುವುದಿದೆ. ವಿ = ವಿಶಿಷ್ಟವಾದ ಇಟ್ಟಿಗೆಯೇ ಸ್ಥಲ = ನೆಲೆಯಾಗಿ ಉಳ್ಳವನೇ ವಿಟ್ಠಲ ಎಂಬುದು ಇದರ ಅರ್ಥ. ವಿತ್‌ಸ್ಥಲ ಎನ್ನುವುದೇ ಮುಂದೆ ವಿಟ್ಠಲ ಎಂದಾಯಿತು ಎನ್ನುವುದೂ ಇದೆ. ಜ್ಞಾನಿಗಳಿಗೆ ನೆಲೆದಾಣ ಎನ್ನುವ ಅರ್ಥ ಬರುತ್ತದೆ. ಅಕ್ಷರಸಾಮ್ಯಾತ್ –––– ಎನ್ನುವುದನ್ನು ಅನುಸರಿಸಿ ಶಾಸ್ತ್ರವಿರುದ್ಧವಾಗಿ ಈ ರೀತಿ ಅರ್ಥಚಿಂತನೆಯೂ ಸರಿಗಾಣುತ್ತದೆ. ಅದನ್ನು ಮಾತ್ರ ಒಪ್ಪಿ ಗುರುರಾಜರು ತೋರಿಸಿದ ನಿರ್ವಚನವನ್ನು ಪ್ರಶ್ನಿಸುವವರು ಶೋಚನೀಯರೇ. ಆ ನಿರ್ವಚನವೂ ಹಿಂದಿನಿಂದಲೂ ಬಂದಿರುವವುವೆಂಬುದನ್ನೂ ಅರಿಯದಾದುದು ವಿಷಾದನೀಯ.

'ಪಾಂಡುರಂಗ' ಎಂಬ ಪದದ ಬಗ್ಗೆಯೂ ನಮಗೆ ಇದಮಿತ್ಥಂ ಎಂಬ ರೀತಿಯ ವ್ಯುತ್ಪತ್ತಿ ಕಾಣಸಿಗುವುದಿಲ್ಲ. ಪೀತಶ್ವೇತಮಿಶ್ರಿತ ಬಣ್ಣವುಳ್ಳ ಅಂಗವುಳ್ಳವನು ಪಾಂಡುರಂಗ ಎಂಬುದಾಗಿ ಕೋಶಗಳಲ್ಲಿ ಅರ್ಥ ಕಾಣಸಿಗುತ್ತದೆ. ವಿಟ್ಠಲನಿಗೂ ಈ ರೀತಿಯಾದ ಅರ್ಥವೂ ಸ್ವಲ್ಪಮಟ್ಟಿಗೆ ಸರಿಹೊಂದುವ ವಿವರಣೆಯೂ ಕಾಣಸಿಗುತ್ತದೆ. ಸಂಜೆಯ ಸಮಯದಲ್ಲಿ ಗೋವಳರೊಡನೆ ಸೇರಿಕೊಂಡು ಗೋವುಗಳ ಜತೆ ಮರಳಿ ಮನೆಗೆ ಬರುವಾಗ ಗೋಧೂಳಿನಿಂದ ಈತನ ಮೈ ಪಾಂಡುರವಾಗಿ ಕಾಣುತ್ತಿತ್ತು.

ಆದ್ದರಿಂದ ಪಾಂಡುರಂಗ ಎಂಬ ಹೆಸರು ಅನ್ವರ್ಥವಾಗುತ್ತದೆ. ಇದಲ್ಲದೆ ಹೀಗೊಂದು ನಿರ್ವಚನ ಸಾಧ್ಯಸಂಭವ ಎಂಬುದಾಗಿ ಹರಿಪದಂಗತರಾದ ಪರಮಪೂಜ್ಯ ಶ್ರೀಶ್ರೀ ವಿಶ್ವೋತ್ತಮತೀರ್ಥಶ್ರೀಪಾದರು ಹೇಳುತ್ತಿದ್ದರು. ಪಂಡಾ ಎಂದರೆ ಜ್ಞಾನ. ಪಾಂಡು ಎಂದರೆ ಉತ್ಕೃಷ್ಟವಾದ ಜ್ಞಾನ ಎಂದರ್ಥ. ಅಂತ ಜ್ಞಾನವುಳ್ಳ ಜ್ಞಾನಿಗಳು ಪಾಂಡವಃ (ಪಾಂಡುಶಬ್ದವಾಚ್ಯರು). ಅವರ ವಿಷಯದಲ್ಲಿ ಅನುರಾಗವುಳ್ಳವನು (ರಭತೇ ಇತಿ ರಂಗಃ) ಪಾಂಡುರಂಗ. ಹೀಗೆ ಜ್ಞಾನಿಗಳ ವಿಷಯದಲ್ಲಿ ಅನುರಾಗವುಳ್ಳ ಭಗವಂತ ಪಾಂಡುರಂಗ. ಅಥವಾ ಅಂತಹ ಜ್ಞಾನಿಗಳನ್ನು ಸಂತೋಷಗೊಳಿಸುವ ಭಗವಂತ ಪಾಂಡುರಂಗ. (–ಪಾಂಡೂನ್ ರಂಜಯತೀತಿ)

ಫಂಡರಾಪುರ ಪುಂಡರೀಕನೆಂಬ ಭಕ್ತಶ್ರೇಷ್ಠನ ಕ್ಷೇತ್ರವಾಗಿ ಪ್ರಸಿದ್ಧವಾಗಿದೆ. ಪುಂಡರೀಕನ ಬಗ್ಗೆಯೂ ಪುರಾಣಗಳಲ್ಲಿ ವಿವರಣೆ ಸಿಗುತ್ತದೆ. ತಂದೆ ತಾಯಿಗಳನ್ನು ಉಪಚರಿಸದೆ ಪ್ರಮತ್ತನಾಗಿದ್ದ ಪುಂಡರೀಕ ಕುಕ್ಕುಟ ಎಂಬ ಋಷಿಯ ಸಲಹೆಯಂತೆ ತಂದೆ ತಾಯಿಗಳ ಸೇವೆಯಲ್ಲಿ ನಿರತನಾಗುತ್ತಾನೆ. ಇದೇ ಸಂದರ್ಭದಲ್ಲಿ ಕೃಷ್ಣನು ಈತನನ್ನು ಕಾಣಲು ಆತನ ಮನೆಗೇ ಬರುತ್ತಾನೆ. ನಾನು ಬಂದಿದ್ದೇನೆ ಎಂದು ಹೊರಗಿನಿಂದ ಕೃಷ್ಣ ಹೇಳಿದಾಗ ಸ್ವಲ್ಪ ಹೊತ್ತು ಹಾಗೇ ಇರು, ತಂದೆ ತಾಯಿಗಳ ಸೇವೆ ಮುಗಿಸಿ ಬಳಿಕ ನಿನ್ನ ಬಳಿಗೆ ಬರುತ್ತೇನೆ. ಅಲ್ಲಿಯ ತನಕ ಈ ಇಟ್ಟಿಗೆಯ ಮೇಲೆ ನಿಂತುಕೋ ಎಂದು ಹೇಳಿ ಆತನಿದ್ದ ಸ್ಥಳದತ್ತ ಇಟ್ಟಿಗೆಯನ್ನು ಪುಂಡರೀಕ ಎಸೆಯುತ್ತಾನೆ. ತನ್ನ ಕೆಲಸವೆಲ್ಲ ಮುಗಿದ ಬಳಿಕ ಆತನ ಬಳಿಗೆ ಹೋಗಿ ಕ್ಷಮೆ ಯಾಚಿಸುತ್ತಾನೆ. ಅಲ್ಲಿಗೆ ಬಂದ ರೂಪ ಬಾಲಕೃಷ್ಣ ರೂಪ ಅಂತಲೂ ಇದೆ; ಗೋವಳನಾಗಿ ನವಿಲುಗರಿಯನ್ನು ತಲೆಯಲ್ಲಿ ಧರಿಸಿದ, ದನಕಾಯುವುದಕ್ಕೆ ಬೇಕಾದ ಕೋಲನ್ನು ಹಿಡಿದುಕೊಂಡು ಬಂದ ರೂಪ ಅಂತಲೂ ಇದೆ. ಶ್ರೀಗುರುರಾಜರು ಈ ಎರಡೂ ಪ್ರಸಕ್ತಿಗಳನ್ನು ಎತ್ತಿಹಿಡಿದದ್ದು ಕಂಡುಬರುತ್ತದೆ. ಗೋಪಾಲಬಾಲಃ ಮತ್ತು ದಂಡವನ್ನು ಕಟಾಕ್ಷೀಕರಿಸಿ ಶಿಕ್ಷಾಮೀತಿ ಅಂತ ಶ್ರೀಗುರುರಾಜರು ಹೇಳಿರುವುದು ಈ ಎರಡೂ ಸನ್ನಿವೇಶಗಳನ್ನು ಪುಷ್ಟೀಕರಿಸುತ್ತದೆ. ಪುಂಡರೀಕನ ಅಪೇಕ್ಷೆಯಂತೆ ಭಗವಂತ ಅದೇ ಇಟ್ಟಿಗೆಯ ಮೇಲೆ, ಕೈಗಳನ್ನು ಸೊಂಟದ ಮೇಲೆ ಇರಿಸಿ ಶಾಶ್ವತವಾಗಿ ನೆಲೆನಿಂತು ಅನುಗ್ರಹಿಸಿದನು.

ಈ ಕ್ಷೇತ್ರ ನಾದಬ್ರಹ್ಮನ ಕ್ಷೇತ್ರವಾಗಿಯೂ ಪರಿಗಣಿತವಾಗಿದೆ. ಹಾಗಾಗಿಯೇ ಪುರಂದರಾದಿ ದಾಸವರೇಣ್ಯರು ಈ ಕ್ಷೇತ್ರದೊಂದಿಗೆ ಘನತರವಾಗಿ ಸಂಬಂಧವನ್ನು ಹೊಂದಿದ್ದರು. ಎಲ್ಲ ದಾಸರೂ ವಿಟ್ಠಲಪದವನ್ನೇ ಪ್ರಧಾನ ಅಂತಪದವನ್ನಾಗಿ ಇಟ್ಟುಕೊಂಡಿದ್ದಾರೆ. ಪುರಂದರದಾಸರಂತೂ ವಿಟ್ಠಲನನ್ನು ಬಗೆಬಗೆಯಿಂದ (ಕಟಿಯಲ್ಲಿ ಕರವಿಟ್ಟನೋ) ಸ್ತುತಿಸಿದ್ದಿದೆ. ವಿಜಯರಾಯರ ಸುಳಾದಿಯಲ್ಲಿಯೂ

ಅನೇಕ ವಿಚಾರಗಳು ಬಂದಿವೆ. ಹೂಣ, ಪುಳಿಂದ ಮೊದಲಾದ ಹೀನ ಜಾತಿಯವರೂ ವಿಟ್ಠಲನನ್ನು ಸ್ತುತಿಸುವರೆಂಬುವುದನ್ನು ವಿಜಯರಾಯರು ಉಲ್ಲೇಖಿಸಿದ್ದಾರೆ. ಮೈಲಾರ ಚಿಕ್ಕಯ್ಯನಿಗೆ ಒಲಿದು ವಿಟ್ಠಲ ನೈವೇದ್ಯ ಭುಜಿಸಿದ ವಿಚಾರವೂ ರಾಯರ ಕೃತಿಯಲ್ಲಿ ಬಂದಿದೆ.

ಈ ಕ್ಷೇತ್ರ ಭೀಮರಥೀ ನದಿಯ ತೀರದಲ್ಲಿದೆ. ನದಿಗೆ ಈ ಹೆಸರು ಹೇಗೆ ಬಂತೆಂಬುದರ ಬಗ್ಗೆ ಕೆಲವರು ದಾರಿತಪ್ಪಿಸಿದ್ದಿದೆ. ಭೀಮಸೇನನ ಸ್ವೇದದ ಜಲದಿಂದ ಇದರ ಉದ್ಗಮ ಆಯಿತೆಂಬುದು ತಪ್ಪು. ಪುರಾಣದಲ್ಲಿ ಬಂದಂತೆ ಭೀಮಸ್ಯ ಮಮ ಕನ್ಯಕಾ ಎಂಬುದಾಗಿ ರುದ್ರದೇವರೇ ಹೇಳುವ ಮಾತಿನಿಂದ ರುದ್ರದೇವರ ಸ್ವೇದದಿಂದ ಸಂಭೂತಳಾದ ಈ ನದಿಗೆ ಭೀಮಾ ಅಥವಾ ಭೈಮೀ ಎಂಬ ಹೆಸರು ಬಂತು. ಅದನ್ನೇ ಭೀಮರಥೀ ಎಂಬುದಾಗಿ ಪುರಾಣಗಳು ವರ್ಣಿಸಿವೆ.

ಇಂತಹ ಕ್ಷೇತ್ರವನ್ನು ಒಂದು ಶ್ಲೋಕದಿಂದ ಹಾಗೂ ಅಧಿಪತಿಯಾಗಿ ವಿಟ್ಠಲನನ್ನು ಮೂರು ಶ್ಲೋಕಗಳಿಂದ ಶ್ರೀಗುರುರಾಜರು ವರ್ಣಿಸಿದ್ದಾರೆ.

ಭೀಮನೆನಿಸಿದ ರುದ್ರದೇವರ ಸ್ವೇದದಿಂದ ಉದ್ಗಮಗೊಂಡ ಭೀಮರಥೀ ಭಕ್ತರ ಪಾಲಿಗೆ ನಿರ್ಮಲಳೂ, ಇಷ್ಟದಾಯಕಳೂ ಆಗಿದ್ದಾಳೆ. ಯಾಕೆಂದರೆ, ಆ ನದಿಯ ಮೇಲ್ಮೈಯಲ್ಲಿ ಹಾದು ಬರುವ ಮಾರುತ ತೀರದಲ್ಲಿ ವಾಸಿಸುವ ಭಕ್ತರ ಸೆಕೆಯನ್ನು ಮಾತ್ರ ಹೋಗಲಾಡಿಸುವುದಿಲ್ಲ, ಮತ್ತೆ ಪಾಪಗಳ ಸಮೂಹವನ್ನೇ ತೊಡೆದುಹಾಕುತ್ತದೆ ಎಂಬುದಾಗಿ ಶ್ರೀಗುರುರಾಜರು ಭೀಮರಥೀನದಿಯ ಉತ್ಪತ್ತಿಕತೆಯ ಸ್ವಾರಸ್ಯವನ್ನು ತಿಳಿಸಿದ್ದಾರೆ. ಇಂತಹ ಕ್ಷೇತ್ರ ಸಜ್ಜನರಿಗೆ ವಾಸಯೋಗ್ಯ ಎಂಬುದಾಗಿ ತಿಳಿಯಬೇಕು.

**ತೀರೇ ಸತ್‌ಸರಿತಃ** – ಎಂಬ ಪದ್ಯದಲ್ಲಿ ಶ್ರೀಗುರುರಾಜರು ಪಾಂಡುರಂಗ ವಿಟ್ಠಲ ನಿಂತ ಭಂಗಿಯನ್ನು ಸ್ವಾರಸ್ಯಯುತವಾಗಿ ವರ್ಣಿಸಿದ್ದಾರೆ. ತಾನು ನಿಂತ ಭಂಗಿಯ ಮೂಲಕವೇ ಭಕ್ತಜನರಿಗೆ ತನ್ನನ್ನು ಹೇಗೆ ಆರಾಧಿಸಬೇಕೆಂಬುದನ್ನು ತೋರಿಸುತ್ತಿದ್ದಾನೆ ಎಂಬುದಾಗಿ ವರ್ಣಿಸಿದ್ದಾರೆ. ತಾನು ದಿಗಂಬರನಾಗಿರುವುದರ ಮೂಲಕ ಭಕ್ತನೂ ಧನ ಮೊದಲಾದವುಗಳಲ್ಲಿ ಅನಾಸಕ್ತನಾಗಿ, ವೈರಾಗ್ಯದಲ್ಲಿ ನಿರತನಾಗಿರಬೇಕೆಂಬುದನ್ನು ಸೂಚಿಸುತ್ತಿದ್ದಾನೆ. ಶಂಖ–ಪದ್ಮಾದಿಗಳನ್ನು ಧರಿಸ ಬೇಕೆಂಬುದನ್ನು, ಸೊಂಟದ ಮೇಲೆ ಇಟ್ಟಿರುವ ಕೈಯ ಬೆರಳು ಅಧೋಮುಖವಾಗಿ ಪಾದವನ್ನು ತೋರಿಸುತ್ತಿರುವುದರಿಂದ ತನ್ನ ಪಾದವನ್ನು ಆರಾಧಿಸಬೇಕೆಂಬುದನ್ನು ತೋರಿಸುತ್ತಿದ್ದಾನೆ. ಈ ರೀತಿಯಾಗಿ ಮಾಡಿದಾಗ ಸಂಸಾರ ಎಂಬ ಸಾಗರ ಸೊಂಟದಷ್ಟು ಮಾತ್ರ ಪ್ರಮಾಣ ಉಳ್ಳದ್ದಾಗುತ್ತದೆ ಎಂಬುದನ್ನು ಸೊಂಟದ ಮೇಲೆ ಇರಿಸಿರುವ ಕೈಗಳಿಂದ ತೋರಿಸುತ್ತಿದ್ದಾನೆ. ನೀರಿನ ಪ್ರಮಾಣ ಸೊಂಟದಷ್ಟು

ಮಾತ್ರ ಇದ್ದರೆ ದಾಟಲು ಸುಕರ ಮತ್ತು ಮುಳುಗುವ ಸಾಧ್ಯತೆಯೂ ಇಲ್ಲವೇ ಇಲ್ಲ. ಒಂದು ವೇಳೆ ಈ ರೀತಿ ಮಾಡದೇ ಇದ್ದರೆ ನಿನ್ನನ್ನು ದಂಡಿಸುವೆನೆಂದು ತೋರಿಸುವುದಕ್ಕೋಸ್ಕರ ಕಾಲುಗಳ ಮಧ್ಯದಲ್ಲಿ ಕೋಲನ್ನು ಹೊಂದಿದ್ದಾನೆ. ಈ ರೀತಿಯಾಗಿ ಭಗವಂತ ತಾನು ನಿಂತ ಭಂಗಿಯಿಂದಲೂ ಭಕ್ತಜನರು ತಿಳಿಯಬೇಕಾದುದನ್ನು ಮತ್ತು ಅನುಸಂಧಾನದ ಕ್ರಮವನ್ನು ಶ್ರೀಗುರುರಾಜರು ತೋರಿಸಿದ್ದಾರೆ. ಈ ರೀತಿಯಾಗಿ ಶ್ರೀಗುರುರಾಜರು ವಿಶಿಷ್ಟವಾಗಿ ವರ್ಣಿಸುವುದು ಅನೇಕ ಕಡೆ ಕಂಡುಬರುತ್ತದೆ. ವಿಶೇಷತಃ ಇದೇ ರೀತಿಯಾಗಿ ನಿಂತ ಭಂಗಿಯ ವರ್ಣನೆಯನ್ನು ಶ್ರೀಕೃಷ್ಣನಿಗೂ ಶ್ರೀನಿವಾಸನಿಗೂ ಶ್ರೀಗುರುರಾಜರು ಮಾಡಿದ್ದಾರೆ. ಹೀಗಾಗಿ ಬ್ರಹ್ಮತ್ರಯರಿಗೂ ಏಕರೀತಿಯ ವರ್ಣನೆಯನ್ನು ಮಾಡುವುದರ ಮೂಲಕ ಬ್ರಹ್ಮತ್ರಯದ ಉಪಾಸನೆಯಲ್ಲಿಯೂ ಏಕವಿಧತೆಯನ್ನು ತೋರಿಸಿಕೊಟ್ಟಂತಾಗಿದೆ.

**ಪಾಪಾವಲೀಪಾಟನ ಪಟ್ವಪಾಂಗಃ** – ಎಂಬ ಪದ್ಯದಲ್ಲಿ ಶ್ರೀಗುರುರಾಜರು ಭಗವಂತನ ಕಟಾಕ್ಷ ಹಾಗೂ ಜಾನು ಜಂಘಾ ಎಂಬ ಅವಯವಗಳನ್ನು ವರ್ಣಿಸಿ ಪ್ರಸನ್ನನಾಗಬೇಕೆಂದು ಪ್ರಾರ್ಥಿಸಿದ್ದಾರೆ. ಭಗವಂತನ ಕಟಾಕ್ಷ (ಕಡೆಗಣ್ಣಿನೋಟ) ಭಕ್ತರ ಪಾಪಸಂಚಯವನ್ನೇ ಕಿತ್ತೊಗೆಯುವಲ್ಲಿ ಸಮರ್ಥವಾಗಿದೆ. ಭಗವಂತನ ಕಣಕಾಲು ಹಾಗೂ ಮೊಣಕಾಲುಗಳನ್ನು ಲಕ್ಷ್ಮೀದೇವಿ ತನ್ನ ಕರಪದ್ಮದಿಂದ ಪೂಜಿಸುತ್ತಾಳೆ. ಹೀಗೆ ಭಗವಂತ ಆಕೆಯ ಮೇಲೆ ನಿತ್ಯಪ್ರಸನ್ನನಾಗಿರುವವನು. ಹೀಗಿದ್ದರೂ ಭಗವಂತ ತಾನೇ ನಮ್ಮ ಮೇಲೆ ದಯೆ ತೋರಿ ಅನುಗ್ರಹೋನ್ಮುಖನಾಗಲಿ ಎಂಬುದಾಗಿ ಪ್ರಾರ್ಥನೆ ಇಲ್ಲಿ ಬಂದಿದೆ. ಸ್ವಯಂ ಕೃಪಯಾ ಎನ್ನುವ ಪದಗಳು ಉಪನಿಷತ್ತಿನಲ್ಲಿ ಬರುವ ಯಮೇವೈಷ ವೃಣುತೇ – ಎಂಬ ಮಾತನ್ನು ಅನುಕರಿಸಿದಂತಿವೆ.

ಈ ಪದ್ಯದಲ್ಲಿ ಶ್ರೀಗುರುರಾಜರು ಪ್ರಮೇಯವೊಂದನ್ನು ಸೂಚಿಸಿದಂತೆ ಕಾಣುತ್ತದೆ. ಸಾಮಾನ್ಯವಾಗಿ ಭಗವಂತನ ಪಾದವನ್ನು ದೇವತೆಗಳಂತೆ ಲಕ್ಷ್ಮೀದೇವಿಯೂ ಆರಾಧಿಸುವುದಿದೆ. ಇಲ್ಲಿ ಪಾಂಡುರಂಗನ ಪಾದವನ್ನು ಉಲ್ಲೇಖಿಸದೆ ಆತನು ಜಾನು ಮತ್ತು ಜಂಘೆಗಳನ್ನು ಲಕ್ಷ್ಮೀದೇವಿ ಪೂಜಿಸುತ್ತಿದ್ದಾಳೆ ಎಂದು ಶ್ರೀಗುರುರಾಜರು ಹೇಳಿದ್ದಾರೆ. ಈ ಮೂಲಕ ಶ್ರೀಗುರುರಾಜರು ಉಳಿದ ದೇವತೆಗಳಿಗೆ ಭಗವಂತನ ಪಾದವನ್ನು ಮಾತ್ರ ಪೂಜಿಸುವ ಅಧಿಕಾರ, ಲಕ್ಷ್ಮೀದೇವಿಗೆ ಜಾನುಪರ್ಯಂತವಾದ ಪಾದವನ್ನು ಆರಾಧಿಸುವ ಅಧಿಕಾರ– ಪಾದಸಂವಹನದ(ಕಾಲನ್ನು ಒತ್ತುವುದು) ಅಧಿಕಾರ ಲಕ್ಷ್ಮೀದೇವಿಗೆ ಮಾತ್ರ. ಈ ಪ್ರಮೇಯ ಶ್ರೀಗುರುರಾಜರು ಬಳಸಿದ ಪದಗಳಿಂದ ಸೂಚಿತವಾಗುತ್ತದೆ.

ಪಾಂಡುರಂಗನ ಪಾದವನ್ನು ಮುಟ್ಟುವ ಯೋಗಭಾಗ್ಯ ಎಲ್ಲ ಭಕ್ತರಿಗೂ ಈ

ಕ್ಷೇತ್ರದಲ್ಲಿ ಇದೆ. ಈ ಕಾರಣಕ್ಕೋ ಎಂಬಂತೆ ಶ್ರೀಗುರುರಾಜರು ಪಾಂಡುರಂಗನ ಪಾದದ ವರ್ಣನೆಗೇ ಒಂದು ಶ್ಲೋಕವನ್ನು ಮೀಸಲಿಟ್ಟಿರಬಹುದೆಂದು ಕಾಣುತ್ತದೆ. ಪದ್ಮ ಶೀತಕಾರಿಯಾಗಿದ್ದು ದೈಹಿಕ ತಾಪ ಮತ್ತು ಅಂಶತಃ ಮಾನಸ ತಾಪವನ್ನು ಪರಿಹರಿಸುತ್ತದೆ; ದುಂಬಿಗಳು ಅಲ್ಲಿರುವ ಮಕರಂದವನ್ನು ಬಯಸುವವುಗಳು. ಅಂತಹ ಮಕರಂದದಿಂದ ಅದು ಆರ್ದ್ರವಾಗಿದೆ. ಸಹಸ್ರದಳಗಳ ಮೂಲಕ ಸಹಸ್ರರಶ್ಮಿಯಾದ ಸೂರ್ಯನಿಗೆ ಸದೃಶವಾಗಿದೆ. ಸೂರ್ಯನಂತೆ ಕೆಂಪು ಬಣ್ಣವನ್ನು ಹೊಂದಿದೆ. ಅಂತಹ ಪದ್ಮದಂತಿರುವ ಭಗವಂತನ ಚರಣ ಮೂರು ವಿಧವಾಗಿ ತಾಪಗಳನ್ನು ಕಳಯುವಂತಹದ್ದು; ಪ್ರೀತಿಪಾತ್ರರಾದ ಭಕ್ತರು ಅದನ್ನು ನೋಡಿ ಅದರ ಸೌಂದರ್ಯವನ್ನು ಪಾನಮಾಡಿ ಸಂತೃಪ್ತರಾಗುವರು. ಅದು ಸೌಂದರ್ಯ ಎಂಬ ಉತ್ಕೃಷ್ಟ ರಸದಿಂದ ಅಥವಾ ಉತ್ಕೃಷ್ಟ ಸೌಂದರ್ಯದಿಂದ ತುಂಬಿಹೋಗಿದೆ. ಸೂರ್ಯನ ಕಾಂತಿಯನ್ನೂ ಹೊಂದಿದೆ. ಇದಕ್ಕಿಂತ ಹೆಚ್ಚಾಗಿ ಮಾಡದ ಕಾರ್ಯವನ್ನು ಭಗವಂತನ ಚರಣ ಮಾಡುತ್ತಿದೆ – ಅದೇ ಪಾಪನಿಬರ್ಹಣ – ಪಾಪಾಪನೋದನಪಟು ಇಂತಹ ಚರಣವನ್ನು ಆಶ್ರಯಿಸಬೇಕೆಂಬುದನ್ನು ಶ್ರೀಗುರುರಾಜರು ತಿಳಿಸಿಕೊಡುತ್ತಾರೆ.

ಹೀಗೆ ಪಾಂಡುರಂಗನ ವೈಭವದ ಅನೇಕ ಮುಖಗಳನ್ನು ನಾಲ್ಕು ಶ್ಲೋಕಗಳ ಮೂಲಕ ತೋರಿಸಿ 4 ಸಂಖ್ಯೆಯ ಸಂಕೇತವಾಗಿ ಪುರುಷಾರ್ಥಚತುಷ್ಟಯ ಪ್ರಾಪ್ತಿಯನ್ನು ಸಂಕೇತಿಸುವ ರೀತಿಯಲ್ಲಿ ಶ್ರೀಗುರುರಾಜರು ವರ್ಣಿಸಿದ್ದಾರೆ. ಶ್ರೀಗುರುರಾಜರಿಗೆ ಒಲಿದ ಭಗವಂತನ ನಮ್ಮ ಪಾಲಿಗೂ ದಯೆ ತೋರಿ ಒಲಿಯಲಿ; ಪ್ರಸನ್ನನಾಗಲಿ.

## ಶ್ರೀಗುರುರಾಜಕೃತ ಕುರುಸ್ತೋತ್ರ

### 'ಮತಾಂತರಂ ತಿರಸ್ಕುರು'

### ಇತರ ಮತಗಳನ್ನು ತಿರಸ್ಕರಿಸು

ದುರ್ಮತಗಳನ್ನು ನಿಂದಿಸುವವರು ಸಜ್ಜನರು. ಇದರಿಂದ ಅವರಲ್ಲಿರುವ ದುಃಖ–ಅಜ್ಞಾನಗಳು ತೊಲಗಿ ಸುಖ–ಜ್ಞಾನಗಳ ಲಾಭವನ್ನು ಹೊಂದುತ್ತಾರೆ. ಈ ಪ್ರಯೋಜನವಿರುವುದರಿಂದ 'ದುಶಾಸ್ತ್ರಂ ದೂರೀಕುರು' ಎಂದು ಸಂಕ್ಷೇಪವಾಗಿ ರಾಜರು ಉಪದೇಶಿಸಿದ್ದಾರೆ.

# ಶ್ರೀಕೃಷ್ಣ ವಿಠಲರ ಜೀವನ

**ವಿ॥ ಉತ್ತನೂರು ಶ್ರೀನಿಧಿ ಆಚಾರ್ಯ, ಬೆಂಗಳೂರು**

ಶ್ರೀ ಕೃಷ್ಣ ವಿಠಲರ ಬಗ್ಗೆ ಐತಿಹಾಸಿಕವಾಗಿ ಹೆಚ್ಚಿನ ಮಾಹಿತಿಸಿಗುವುದಿಲ್ಲ. ಅವರೇ ತಮ್ಮ ಕೀರ್ತನೆಗಳಲ್ಲಿ ಹೇಳಿಕೊಂಡ ಇತಿಹಾಸವನ್ನು ಸಂಗ್ರಹಿಸಬೇಕಾಗುತ್ತದೆ.

**'ಪಾರಂಪರೆಯಿಂದ ವೈಶ್ಯವೃತ್ತಿ'**
**ಸಪ್ತ ಶ್ರೀರಷಾ ಬಂದ ವೈಶ್ಯವೃತ್ತಿಗೆ ಕಿಚ್ಚನಿಟ್ಟೆ'**

ಎಂಬ ಸಾಲುಗಳು ಇವರು ಬ್ರಾಹ್ಮಣರಾಗಿದ್ದರೂ ವೈಶ್ಯವೃತ್ತಿಯನ್ನು ಅನುಸರಿಸಿ ಕೊಂಡು ಇದ್ದರು ಎಂಬುದನ್ನು ಹೇಳುತ್ತದೆ. ಇಂತಹ ವೈಶ್ಯವೃತ್ತಿ ಇವರ ಮನೆತನದ ಪರಂಪರೆಯಾಗಿ ಏಳು ತಲೆಮಾರುಗಳಿಂದಲೂ ನಡೆಸಿಕೊಂಡು ಬರುತ್ತಿದ್ದರು ಎಂಬುದು ತಿಳಿದುಬರುತ್ತದೆ. ಮುಂದೆ ವಾದಿರಾಜರ ಪರಮಾನುಗ್ರಹದಿಂದ ಅಂತಹ ವೈಶ್ಯವೃತ್ತಿಗೆ (ಲೌಕಿಕ ವ್ಯಾಪಾರ) ಬೆಂಕಿಯನ್ನು ಇಡುತ್ತಾ (ಅಭಿಮಾನ ತ್ಯಾಗ ಮಾಡುತ್ತಾ) ಭಿಕ್ಷಾವೃತ್ತಿಯನ್ನು ಅನುಸರಿಸುತ್ತಾರೆ.

ಇವರ ತಂದೆ–ತಾಯಿ–ಅಣ್ಣ–ಬಂಧು–ಬಾಂಧವರು ಹೆಚ್ಚಿನ ಆಚಾರ–ವಿಚಾರವನ್ನು ಇಟ್ಟುಕೊಂಡವರೇನಲ್ಲ.

**'ತಂದೆ–ತಾಯಿ–ಅಣ್ಣ–ತಮ್ಮ ಬಂಧು ಬಳಗವೆಲ್ಲಾ**
**ದುಂದ ಮಡಿ ಮೈಲಿಗೆಯನ್ನು ತಿಳಿಯದ.....'**

ಎಂಬುದು ಮೇಲಿನ ವಾಕ್ಯದ ಕೃಷ್ಣ ವಿಠಲರ ಹಾರ್ದ.

ಇವರು ತಂದೆ–ತಾಯಿಗೆ–ಬಂಧು ಬಳಗ ವರ್ಗಕ್ಕೆ ಹಿತೋಪದೇಶವನ್ನು ಮಾಡಲು ಹೊರಟರೆ ಅವರೆಲ್ಲ ಇವರನ್ನು ನಿಂದೆ ಮಾಡಿ ಇವರನ್ನು ಆಚೆಗಟ್ಟುತ್ತಾರೆ. ಇವರನ್ನು ಬೆನ್ನತ್ತಿ ಇಬ್ಬರು ಹೆಂಡತಿಯರು ಬರುತ್ತಾರೆ. ಕಂದರ–ಗುಹೆಗಳನ್ನು ಸೇರುತ್ತಾ ಸೋದಾ ಕ್ಷೇತ್ರವನ್ನು ತಲುಪುತ್ತಾರೆ. ಅಷ್ಟು ಹೊತ್ತಿಗಾಗಲೇ ಅವರಿಗೆ 58 ವರ್ಷ. ಇನ್ನೂ ಮಕ್ಕಳಾಗದ ಸ್ಥಿತಿಯನ್ನು, ಹೆಂಡಿರನ್ನು ಸಾಕುವ ಜವಾಬ್ದಾರಿಯನ್ನು ನೆನೆದು ಆತ್ಮಹತ್ಯೆಗೆ ಹಲವು ಬಾರಿ ಪ್ರಯತ್ನಿಸುತ್ತಾರೆ. ಆಗ ರಾಜರ ದಿವ್ಯ ಅನುಗ್ರಹದಿಂದ ಇನ್ನೂ ಸಾಧನೆಯ ಜೀವನವನ್ನು ಮುನ್ನಡೆಸುತ್ತಾರೆ.

ಶ್ರೀಕೃಷ್ಣವಿಠಲರು ಮೇಲ್ಕಾಣಿಸಿದ ತಮ್ಮ ವಿಷಯವನ್ನು ನಿರೂಪಿಸುವ ಉಕ್ತಿಗಳು ಹೀಗಿವೆ –

**ತಂದೆ–ತಾಯಿ ಅಣ್ಣ ತಮ್ಮ ಬಂಧು ಬಳಗವೆಲ್ಲ ಎನ್ನ**
**ನಿಂದೆ ಮಾಡಿ ನಿನಗೊಪ್ಪಿಸಿ ಬಿಟ್ಟರೆ ಯೇ ಗೆಣೆಯಾ?**
**ನೊಂದು ಕ್ಲೇಶಾ ಬಿಟ್ಟು ಹೋಗಿ ಕಂದರ ಗುಹೆ ಸೇರಿದೆ**
**ಬಂದರೀರ್ವರು ಬೆನ್ನತ್ತಲೆರ ಕೊಂಡಲೆನಬೇಕಾದರೆ ಬಲು ಅತ್ತೆ,**
**ಇನ್ನ್ಯಾಕೀ ದೇಹವೆಂದು ವಿಷ ಕುಡಿದೆ ಸಾಯಲಿಲ್ಲ**
**ಘಾತ ಮಾಡಿಕೊಂಡು ಜೀವ ಕೊಡಬೇಕೆಂದು ಆಲೋಚಿಸಿದ್ದೆ'**
**'ಕಂದರಿಲ್ಲದ ಭಾಗ್ಯ ಕೊಟ್ಟರೊಲ್ಲೆ ಸುಡುಯನಗೆ**
**ಸಂದಿ ಹೋದವು ಯೆರಡೂನರವತ್ತು ವರುಷಾ....'**

ಒಮ್ಮೆ ಆತ್ಮಹತ್ಯೆಗೆ ವಿಷಪಾನ ಮಾಡಿದರೂ ಸಾಯುವುದಿಲ್ಲ. ಇದೆಲ್ಲ ಶ್ರೀ ಅವರ ಜೀವನದಲ್ಲಿ ನಡೆದ ಪವಾಡ.

ಅಲ್ಲದೆ ಅವರು ಬಹಳ ಬಡತನ–ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದ್ದಾರೆ. 'ಪರರ ಮನಿಗೆ ಪೋಗಿ ತಿರುಕಿ ಅನ್ನವನುಂಡು ಬದುಕುವಕಿಂತ ಸಾಯುವುದೆ ಲೇಸು' ಎಂಬ ಅವರ ಮಾತು ಅವರ ಬಡತನವನ್ನು ಅನಾವರಣಗೊಳಿಸುತ್ತದೆ.

ಸೋದಾ ಕ್ಷೇತ್ರದಲ್ಲಿ ವಾದಿರಾಜರ ದಿವ್ಯ ಅನುಗ್ರಹವಾದ ಪೂರ್ವ ಜನ್ಮದ ಸ್ಮೃತಿಯೂ ಬರುತ್ತದೆ. ಪೂರ್ವ ಜನ್ಮದ ಸ್ಮೃತಿಯನ್ನು ತಂದು ಕೊಡುವ ಗುರುಗಳು ವಾದಿರಾಜರಲ್ಲದೆ ಇನ್ನ್ಯಾರು ಇದ್ದಾರೆ? ಎಂದು ಉದ್ಗರಿಸಿದ್ದಾರೆ.

**'ನಾ ಮಹಾ ದುರ್ಬುದ್ಧಿ ಬಿಡಿಸಿದ**
**ಈ ಮಹಾ ಗುರು ಪೇಳಿ ಪೂರ್ವ ಜನ್ಮದ ಸುದ್ದಿ**
**ಈ ಮಹಿಮೆ ಇನ್ಯಾರಲ್ಲುಂಟು ಇದರಿಂದ**
**ಈ ಮಹಾರಾಯನ ಪಾದಕೆ ಯನ್ನಣೆಗೆ ಗಂಟು'**

ಇವರಿಗೆ ವಾದಿರಾಜರೇ ತಾಯಿ, ವಾದಿರಾಜರೇ ತಂದೆ, ವಾದಿರಾಜರೇ ಬಂಧು ಬಳಗ.

**'ಕುನ್ನಿ ಖಳ ದುರ್ವಾದಿ ಮಾಯಿ ಮತ**
**ವನ ಕುಠಾರಿ ಗುರುರಾಜಾ ನಮ್ಮ ತಾಯಿ'**

**'ತಾತ ಈತನೆ ಎಂಬೆ ಮತ್ತು ಮತ್ತು**
**ಡಂಗುರವ ಹೋಯಿಸುವೆ...'**

**'ಮಮ ಮೂಲಗುರು ನೋಡಿ ತಾ**
**ವೃಂದಾವನದಿ ಸುಮನಸಾರ್ಚಿತ ಸನ್ನಿಹಿತಾ'**

ಎಂಬ ಅವರ ಮಾತು... ಬರೀ ಮಾತಾಗಿರದೇ

**'ಮಾತಾ ರಾಜಾ, ಮತ್ಪಿತಾ ವಾದಿರಾಜೋ**
**ಭ್ರಾತಾ ರಾಜಾ, ಮತ್ಸಖಾ ವಾದಿರಾಜಃ**
**ಸರ್ವಸ್ವಂ ಮೇ ವಾದಿರಾಜೋ ದಯಾಲುಃ**
**ನಾನ್ಯದ್ ದೈವಂ ನೈವ ಜಾನೇ ನ ಜಾನೇ' ॥**

ಎಂಬುದರ ಅನುಸಂಧಾನ ಸಹಿತ ಅನುಷ್ಠಾನವಾಗಿತ್ತು.

ಇವೆಲ್ಲವನ್ನು ಗಮನಿಸಿದಾಗ ಈ ಮಹಾಮಹಿಮರು ಭಾಗವತ ಧರ್ಮವನ್ನು ಸಾರುವ ಭಾಗವತದ ಈ ಶ್ಲೋಕವನ್ನು ಹೇಗೆ ಚಿಂತನೆ ಮಾಡಿ ಜೀವನದಲ್ಲಿ ಅಳವಡಿಸಿಕೊಂಡಿದ್ದರು ಎಂಬುದು ತಿಳಿದುಬರುತ್ತದೆ.

**'ಗುರುರ್ನ ಸಸ್ಯಾತ್ಸ್ವಜನೋ ನ ಸ ಸ್ಯಾ–**
**ತ್ಪಿತಾ ನ ಸ ಸ್ಯಾಜ್ಜನನೀ ನ ಸಾ ಸ್ಯಾತ್**

ಪ್ರವೃತ್ತ ಧರ್ಮದಲ್ಲಿಯೇ ಪ್ರೇರಿಸುವ ಉಪದೇಶಕನು ಗುರುವಾಗಲೀ – ತಂದೆ–ತಾಯಿಯಾಗಲೀ, ಸ್ವಜನನಾಗಲೀ, ನಿನ್ನ ದಾತನಾಗಲೀ, ಸಾಕ್ಷಾತ್ ದೈವವೇ ಆಗಲಿ ಅವರು ತ್ಯಾಜ್ಯರೇ ಎಂಬ ಭಾಗವತದ ಮಾತು ಅಕ್ಷರಶಃ ಶ್ರೀಕೃಷ್ಣ ವಿಠಲರ ಜೀವನದಲ್ಲಿ ಅನ್ವಿತವಾಗುತ್ತದೆ.

ಅಂತಹ ಗಂಡೆದೆ ಮತ್ತು ಧರ್ಮದೀಕ್ಷೆಯನ್ನು ಶ್ರೀಕೃಷ್ಣ ವಿಠಲರು ಸಂಪಾದಿಸಿದ್ದು ಭಾವಿಸಮೀರ ವಾದಿರಾಜರ ಪರಮಾನುಗ್ರಹದಿಂದಲೇ.

## ಭಾವಿಸಮೀರ ಶ್ರೀವಾದಿರಾಜವಿರಚಿತ

# ಸ್ವಪ್ನಪದ – 11

**ವಿ॥ ಕಡಗತ್ತೂರು ಪುರುಷೋತ್ತಮಾಚಾರ್ಯ**
9060302201

**(ಮುಂದುವರಿದ ಭಾಗ)**

### ಪದ್ಯ–೦೯

**ಶ್ಲೋ : ನಾರಾಯಣೋ ನಾಮ ಹರಿಃ ಸ್ವತಂತ್ರಃ**
**ಶ್ರಿಯಂ ವಿನಾ ನಾಸ್ತಿ ಕದಾಪಿ ಕಾಲೇ ।**
**ಹರಿಂ ವಿನಾ ಶ್ರೀರಪಿ ದೇಶಕಾಲೇ**
**ನಾಸ್ತೀತಿ ಮೋಕ್ಷೆಚ್ಛುಭಿರ್ವೇದಿತವ್ಯಮ್ ॥ (ಶ್ರೀಬ್ರಕಾಂ)**

ನಾರಾಯಣನು ಸರ್ವಸ್ವತಂತ್ರನು. ಶ್ರೀಹರಿಯು ಶ್ರೀಲಕ್ಷ್ಮೀದೇವಿಯನ್ನು ಬಿಟ್ಟು ಅರೆಘಳಿಗೆಯೂ ಇರುವುದಿಲ್ಲ. ಶ್ರೀಲಕ್ಷ್ಮೀದೇವಿಯು ಶ್ರೀಹರಿಯನ್ನು ಬಿಟ್ಟು ಇರುವುದಿಲ್ಲ. ಇವರಿಬ್ಬರು ದೇಶಕಾಲದಿಂದ ಸಮರು. ಈ ತತ್ವವನ್ನು ಮೋಕ್ಷಾಪೇಕ್ಷಿಗಳು ತಿಳಿಯಬೇಕು. ಈ ತತ್ವವನ್ನು ತಿಳಿದರೆ ಸಂಸಾರದಿಂದ ಮುಕ್ತಿ ದೊರೆಯುತ್ತದೆ ಎಂದು ಮುಂದಿನ ಪದ್ಯದಲ್ಲಿ ಉಪದೇಶಿಸಿರುವನು.

**ಪದ್ಯ : ಎನ್ನ ವೈಕುಂಠಾವಲೋಕನ**
**ಜನ್ನರಿಗೆ ಭವಬಂಧಮೋಚನ–**
**ವೆನ್ನನಾಮಸ್ಮರಣೆ ಪಾಪಾಟವಿಗೆ ಕಾಳ್ಗಿಚ್ಚು**
**ಇನ್ನು ನೀನನ್ಯರನು ಬೀಳ್ಕೊ–**
**ಟ್ಟೆನ್ನ ಚರಣದೊಳಿಟ್ಟು ಮನವನು**
**ಘನ್ನಭಕುತಿಯ ಮಾಡು ಸುಕೃತವ ಕೂಡು ನಲಿದಾಡು**

**ಅರ್ಥ:** ಮುಕ್ತಿಸ್ಥಾನವಾದ ವೈಕುಂಠಲೋಕದ ದರ್ಶನವು ಸಾತ್ವಿಕ ಜೀವರಾಶಿಗಳಿಗೆ ಸಂಸಾರ ಬಂಧನದಿಂದ ಮುಕ್ತಿಯು. ನನ್ನ ನಾಮಸ್ಮರಣೆಯು ಪಾಪವೆಂಬ ಅಡವಿಗೆ ಕಾಡ್ಗಿಚ್ಚು. ಹೀಗಿರುವಾಗ ನೀನು ಅನ್ಯರನ್ನು ಉಪಾಸನೆ ಮಾಡುವುದನ್ನು ಬಿಟ್ಟು

ನನ್ನ ಪಾದಾರವಿಂದದಲ್ಲಿ ಮನಸ್ಸನ್ನು ಇಟ್ಟು ಶ್ರೇಷ್ಠವಾದ ಭಕುತಿಯನ್ನು ಮಾಡು, ಸುಖಭಾಗಿಯಾಗಿ ನಲಿದಾಡು.

**ವಿ.ಅ. : ಎನ್ನ ವೈಕುಂಠಾವಲೋಕನ ಜನರಿಗೆ ಭವಬಂಧಮೋಚನ–**

ಭಗವಂತನ ಆವಾಸಸ್ಥಾನವಾದ ವೈಕುಂಠಲೋಕದ ಚಿಂತನೆಯು ಸಾತ್ವಿಕರಿಗೆ ಸಂಸಾರಬಂಧನದಿಂದ ವಿಮುಕ್ತಿಯು ದೊರೆಯುತ್ತದೆ.

**ಶ್ಲೋ.: ನನು ತತ್ರ ವಿಶ್ವವಿಭವೈಕಪದಂ**
**ಪ್ರತಿಭಾತಿ ಪೂರ್ಣ ಪುರುಷಸ್ಯ ಪುರೀ ।**
**ಉಪಲಭ್ಯತೇ ಯದುಪಮಾನಪದಂ**
**ಪ್ರತಿಬಿಂಬಮೇವ ಮಣಿವಪ್ರಗತಮ್ ॥ (ಶ್ರೀಸುವಿ 11–8)**

ವೈಕುಂಠನಗರವು ಸಮಸ್ತ ಐಶ್ವರ್ಯಗಳಿಂದಲೂ ಕೂಡಿದೆ. ಪ್ರಕಾಶಮಾನವಾದ ಈ ಪಟ್ಟಣಕ್ಕೆ ಸಮವಾದ ಇನ್ನೊಂದು ಪಟ್ಟಣವೇ ಇಲ್ಲ. ರತ್ನಗಳಿಂದ ನಿರ್ಮಿಸಿದ ಪಟ್ಟಣವು ಇದಾಗಿದೆ. ಈ ಪಟ್ಟಣಕ್ಕೆ, ಈ ಪಟ್ಟಣವೇ ಉಪಮಾನ ಹೊರತು ಬೇರೊಂದಿಲ್ಲ.

**ಶ್ಲೋ.: ಆಶ್ಚರ್ಯರತ್ನೇಷ್ವಧಿಕಂ ಜಗತ್ರಯೇಽ**
**ಪ್ಯಾಶ್ಚರ್ಯಮಾಶ್ಚರ್ಯಮಹೋ ಮುಹುರ್ಮುಹುಃ ।**
**ಸೌಂದರ್ಯಸಾರೈಕರಸಂ ರಮಾಪತೇ**
**ರೂಪಂ ಸಮಾನಂದಯತೀಹ ಮೋಕ್ಷಿಣಃ ॥ (ಶ್ರೀಸುವಿ 11–25)**

ಮೂರು ಲೋಕದಲ್ಲಿಯೂ ಆಶ್ಚರ್ಯಪದಾರ್ಥಗಳಲ್ಲಿ ಆಶ್ಚರ್ಯವಾದ ಮತ್ತೆ ಮತ್ತೆ ನೋಡಬೇಕೆಂಬ ಹಂಬಲವನ್ನು ಹುಟ್ಟಿಸುವ ಶ್ರೀರಮಾಪತಿಯಾದ ಶ್ರೀಮನ್ನಾರಾಯಣನ ಸೌಂದರ್ಯಸಾರವನ್ನು, ಆನಂದದಾಯಕ ರೂಪವನ್ನು ಮುಕ್ತರು ಮಾತ್ರ ನೋಡಿ ಆನಂದಿಸುತ್ತಾರೆ.

**ಶ್ಲೋ.: ವೈಕುಂಠನಾಮ ಲೋಕೋಽಯಂ ದಿವ್ಯಂ ನಿತ್ಯಂ ಸನಾತನಮ್ ।**
**ಅವೈಷ್ಣವಾನಾಮಪ್ರಾಪ್ಯಂ ಗುಣತ್ರಯವಿವರ್ಜಿತಮ್ ॥**
**ನಿತ್ಯಸಿದ್ಧೈಃ ಸಮಾಕೀರ್ಣಂ ತನ್ಮಯೈಃ ಪಾಂಚಕಾಲಿಕೈಃ ।**
**ಸಭಾಪ್ರಾಸಾದಸಂಯುಕ್ತಂ ವನೈಶ್ಚೋಪವನೈರ್ವೃತಮ್ ॥**

**ವಾಪೀಕೂಪತಟಾಕೈಶ್ಚ ವೃಕ್ಷಷಂಡೈಶ್ಚ ಮಂಡಿತಮ್ ।**
**ಅಪ್ರಾಕೃತಂ ಸುರೈರ್ವಂದ್ಯಂ ಅಯುತಾರ್ಕಸಮಪ್ರಭಮ್ ॥**

**ಪ್ರಕೃಷ್ಟಸತ್ವರಾಶಿಂ ತ್ವಾಂ ಕದಾ ದ್ರಕ್ಷ್ಯಾಮಿ ಚಕ್ಷುಷಾ ।**
**ಬ್ರಹ್ಮಲೋಕಪದಾದೂರ್ಧ್ವಂ ಯತ್ಪುರಂ ಚಕ್ರಪಾಣಿನಃ ॥**
**ಗೋವಿಂದಭಕ್ತಿರ್ಮಹತಾಂ ನರಾಣಾಂ ಚ ನ ಸಂಶಯಃ ॥**

ಲೋಕೈಕನಾಥ ನಾರಾಯಣನಿಗೆ ಪ್ರಿಯವಾದ ವೈಕುಂಠಪುರಿಯನು ವರ್ಣಿಪೆನು
ಶ್ರೀಕಾಂತನಲ್ಲಿ ಮುಕ್ತರಿಗೆ ಎಂದೆಂದು ನಿರಾಕುಲ ಸುಖವಿತ್ತು ಪೊರೆವ
ಶ್ರೀಕೃಷ್ಣನಂಪ್ರಿಯ ನೆನೆಯದವರಿಗೆ ಈ ಲೋಕವೆಂದೆಂದು ದೊರಕದು
ಪ್ರಕೃಷ್ಟ ತತ್ವರಾಶಿಗಳಲ್ಲಿಪ್ಪವು ಗಡ ಪ್ರಾಕೃತವಲ್ಲ ನಿತ್ಯಗಡ

ಎಂದೆಂದು ನಿತ್ಯ ಸನಾತನವೆಂಬ ಈ ಚೆಂದದ ಪದವು ದಿವ್ಯಗಡ
ನಿಂದ್ಯ ತ್ರಿಗುಣಂಗಳು ಪೊಂದವೀ ಲೋಕಕ್ಕೆ ಕುಂದುಕೊರತೆಯಿಲ್ಲ ಗಡ ॥

ಅದರಿಂದ ಬೊಮ್ಮಾದಿ ದೇವರೆಲ್ಲರೂ ಹರಿಯ ಸದನವೆನಿಪ ಪುರತ್ರಯಕೆ ।
ಮುದದಿಂದ ಕೈಮುಗಿದು ಪೂಜಿಸುವರೆಂದೆಂದೀ ಪದ ನಿತ್ಯ ಸಿದ್ಧಾಸ್ಪದ ಗಡ ॥

ಅಲ್ಲಿದ್ದ ವಾಪಿಕೂಪತಟಾಕಂಗಳು ಮತ್ತಲ್ಲಿದ್ದ ಮನೆ ಉಪ್ಪರಿಗೆಗಳು
ಬಲ್ಲಿದ ರಮೆ ತನ್ನ ನಲ್ಲನ ಚಿತ್ತವ ವಲ್ಲಿಸಬೇಕೆಂದಿಹಳು ಗಡ ॥

ಅರ್ಕಕೋಟಿಗಳಂತೆ ವೈಕುಂಠಲೋಕ ದಶ ದಿಕ್ಕಿನೊಳಗೆ ಬೆಳಗುವುದು
ಲಕುಮಿಗಲ್ಲದೆ ಇಂಥ ಕಾಂತಿ ಮಿಕ್ಕವರಿಗೆ ಬಕೆ ನೀವೇ ವಿಚಾರಿಸಿರೋ ॥
ವೈಕುಂಠವೆಂಬ ಹರಿಯ ಲೋಕ ಬೊಮ್ಮನ ಲೋಕಕಿಂತಲೂ ಮೇಲಿಹುದು ।
ಶೋಕರಹಿತರಾದ ಸಿದ್ಧಸಾಧ್ಯರಲ್ಲಿ ಬೇಕಾದ ಸುಖವನುಣುತಿಹರು ॥

ಲಕ್ಷಯೋಜನ ಮೇಲಕ್ಕನಂತಾಸನ ಲಕ್ಷ್ಮೀಶನಿಹ ಶ್ವೇತದ್ವೀಪ ।
ಲಕ್ಷ ಐವತ್ತು ವೈಕುಂಠ ಇಪ್ಪತ್ತೈದು ಲಕ್ಷ ಷೋಡಷ ಕೋಟಿಯಲ್ಲಿಹುದು ॥
(ವೈವ)

**ವಿ.ಅ. : ಎನ್ನ ನಾಮಸ್ಮರಣೆ ಪಾಪಾಟವಿಗೆ ಕಾಳ್ಗಿಚ್ಚು –**

ಹರಿನಾಮಸ್ಮರಣೆಯು ಪಾಪವೆಂಬ ಅರಣ್ಯಕ್ಕೆ ಕಾಡ್ಗಿಚ್ಚು ಸುಡುವಂತೆ ಸುಡುತ್ತದೆ.

**ಶ್ಲೋ: ಕೃಷ್ಣೇತಿ ಮಂಗಲಂ ನಾಮ ಯಸ್ಯ ವಾಚಿ ಪ್ರವರ್ತತೇ ।**
**ತಸ್ಯ ಭಸ್ಮೀಭವಂತ್ಯಾಶು ಮಹಾಪಾತಕಕೋಟಯಃ ।**
(ಶ್ರೀಗಪು)

ಶ್ರೀಕೃಷ್ಣ ಎಂಬ ಮಂಗಲನಾಮವು ಯಾರ ಬಾಯಲ್ಲಿ ಉಚ್ಚರಿಸಲ್ಪಡುತ್ತದೆಯೋ ಅವನು ಮಾಡಿದ ಕೋಟಿಗೂ ಅಧಿಕ ಪಾಪಗಳು ಭಸ್ಮವಾಗುತ್ತವೆ.

**ಶ್ಲೋ : ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ ।**
**ಅನಿಚ್ಛಯಾದಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ ॥**

(ಶ್ರೀ ಗ ಪು)

ಬೆಂಕಿಯನ್ನು ತಿಳಿಯದೇ ಮುಟ್ಟಿದರೂ ಅದು ನಮ್ಮನ್ನು ಸುಡುತ್ತದೆ. ಅದರಂತೆ ದುಷ್ಟ ಮನಸ್ಸಿನಿಂದಲಾದರೂ ಹರಿಸ್ಮರಣೆ ಮಾಡಿದರೆ ಅದು ನಮ್ಮ ಪಾಪವನ್ನು ನಾಶಮಾಡುತ್ತದೆ.

**"ಕೆಂಡ ಕಂಡು ಮುಟ್ಟಿದರೂ ಸರಿ ಕಾಣದೆ ಮುಟ್ಟಿದರೂ ಸರಿ ದಹಿಸದಿರ್ಪುದೇ?"**

**ಶ್ಲೋ : ಹರೇರ್ನಾಮಸು ಯಾ ಶಕ್ತಿಃ ಪಾಪನಿರ್ವಹಣೇ ದ್ವಿಜ ।**
**ತಾವತ್ಕರ್ತುಂ ಸಮರ್ಥೋ ನ ಪಾತಕಂ ಪಾತಕೀ ಜನಃ ॥**

(ಶ್ರೀ ಗ ಪು )

ಶ್ರೀಹರಿಯ ನಾಮಕ್ಕೆ ಎಷ್ಟು ಪಾಪಗಳನ್ನು ನಾಶಮಾಡುವ ಶಕ್ತಿ ಇದೆಯೋ, ಅಷ್ಟು ಪಾಪಗಳನ್ನು ಪಾಪಿಯು ಮಾಡಲು ಸಾಧ್ಯವಿಲ್ಲ.

**ವಿ.ಅ.: ಇನ್ನು ನೀನ್ಯರನು ಬೀಳ್ಕೊಟ್ಟು ಎನ್ನ ಚರಣದೊಳಿಟ್ಟು ಮನವನು –**

'ಆದದ್ದಾಯಿತು, ಇನ್ನಾದರೂ ಒಳ್ಳೆ ಹಾದಿ ಹಿಡಿಯೋ ಪಾಪಿ' ಎಂಬ ದಾಸೋಕ್ತಿಯಂತೆ ಇನ್ನು ಮುಂದೆ ಇತರ ದೇವತೆಗಳ (ಕ್ಷುದ್ರ ದೇವತೆಗಳ) ಉಪಾಸನೆಯನ್ನು ಬಿಟ್ಟು ಶ್ರೀಹರಿಯೇ ಸರ್ವೋತ್ತಮ ಎಂಬ ತತ್ವವನ್ನು ತಿಳಿದು ನಿನ್ನ ಮನಸ್ಸನ್ನು ನನ್ನ ಚರಣದಲ್ಲಿರಿಸು

**ವಿ.ಅ.: ಘನ್ನ ಭಕುತಿಯ ಮಾಡು –**

ಭಾಗವತಾದಿ ಗ್ರಂಥಗಳಲ್ಲಿ ತಿಳಿಸಿದಂತೆ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ ಎಂಬ ನವವಿಧ ಭಕ್ತಿಯನ್ನು ಮಾಡಬೇಕು.

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।**
**ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥** (ಶ್ರೀಮಭಾ)

ಜೊತೆಗೆ ನವವಿಧ ದ್ವೇಷಗಳನ್ನು ಮಾಡಬಾರದು.

**ಜೀವಾಭೇದೋ ನಿರ್ಗುಣತ್ವಂ ಅಪೂರ್ಣಗುಣತಾ ತಥಾ ।**
**ಸಾಮ್ಯಾಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವ ಚ ॥**
**ಪ್ರಾದುರ್ಭಾವವಿಪರ್ಯಾಸಃ ತದ್ಭಕ್ತದ್ವೇಷ ಏವ ಚ ।**
**ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ ॥** (ಶ್ರೀಭಾ.ತಾ)

**ನವವಿಧ ದ್ವೇಷಗಳು**

1. ಜೀವನು ಶ್ರೀಹರಿಯಿಂದ ಅಭಿನ್ನನು
2. ಶ್ರೀಹರಿಯು ಆನಂದಾದಿಗುಣಶೂನ್ಯನು
3. ಅಪೂರ್ಣಗುಣನು
4. ಇತರರು ಶ್ರೀಹರಿಯ ಸಮರು ಅಥವಾ ಆಧಿಕ್ಯ ಉಳ್ಳವರು
5. ಶ್ರೀಹರಿಯ ಅವಯವಗಳು ಮತ್ತು ರೂಪಗಳು ಪರಸ್ಪರ ಭಿನ್ನಗಳು
6. ಅವನ ಅವತಾರಗಳು ಪ್ರಾಕೃತದೇಹವು
7. ಅನ್ಯರು ಶ್ರೀಹರಿಯ ಅವತಾರ.
8. ಹರಿಭಕ್ತರ ದ್ವೇಷ.
9. ವೇದಾದಿ ಆಗಮಗಳು ಅಪ್ರಮಾಣವು

ಎಂದು ಈ ರೀತಿ ನವವಿಧ ದ್ವೇಷಗಳನ್ನು ಮಾಡಬಾರದು.

**ವಿ.ಅ. ಸುಕೃತವ ಕೂಡು ನಲಿದಾಡು –**

ನಿನ್ನ ಸ್ವರೂಪದ ಸುಖವನ್ನು (ವೈಕುಂಠವನ್ನು) ಹೊಂದಿ ಅಲ್ಲಿಯೂ ಭಗವಂತನ ಸ್ಮರಣೆ ಮಾಡುತ್ತಾ ನಲಿದಾಡು ಎಂಬುದಾಗಿ ಭಗವಂತನು ಶ್ರೀವಾದಿರಾಜರಿಗೆ ಉಪದೇಶಿಸಿರುವನು.

# ನಮ್ಮ ಸ್ವರೂಪೋದ್ಧಾರಕರಾದ ಗಂಗಾದರ್ಶಕರು

**– ಸ್ವರ್ಣವರ್ಣದಾಸ**

ನಮ್ಮ ಸ್ವರೂಪೋದ್ಧಾರಕರಾದ ಶ್ರೀಶ್ರೀವಿಶ್ವೋತ್ತಮತೀರ್ಥಶ್ರೀಪಾದರ ಆರಾಧನಾನಿಮಿತ್ತ ಅವರ ಕೆಲವು ಮಹಿಮೆಗಳನ್ನು ಚಿಂತನೆ ಮಾಡೋಣ. ಶ್ರೀ ಗುರುರಾಜರ ಕಾರುಣ್ಯಕ್ಕೆ ಪಾತ್ರರಾದ ಶ್ರೀವಿಶ್ವೋತ್ತಮರು ಒಬ್ಬ ಸಾಧಕ ಹೇಗೆ ಬದುಕಿ ಸಾಧನೆ ಮಾಡಿಕೊಳ್ಳಬೇಕು ಎಂಬುದು ಅವರ ಜೀವನ ಶೈಲಿಯನ್ನು ನೋಡಿ ತಿಳಿಯಬಹುದಾಗಿದೆ. ಏಕಾಂತ ವಾಸ, ಅಧ್ಯಯನ, ಚಿಂತನೆ ಹಾಗೂ ಲೇಖನ ಇವುಗಳು ಅವರ ನಿತ್ಯ ಬದುಕಿನ ಕಾರ್ಯಗಳಾಗಿದ್ದವು. ಮಹಾಭಾರತ ತಾತ್ಪರ್ಯ ನಿರ್ಣಯಕ್ಕೆ ವ್ಯಾಖ್ಯಾನ, ಲೇಖನ ಮಾಡಿದ್ದಾರೆ, ಸರಿಸುಮಾರು 200 ಪುಟದ ಹಲವಾರು ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಇದು ಹೊರಜಗತ್ತಿಗೆ ಪರಿಚಯವೇ ಇಲ್ಲ. ಇದು ಅವರ ಪಾಂಡಿತ್ಯದ್ಯೋತಕ. ಶ್ರೀಗುರುರಾಜರ ಸ್ವಾಪ್ನ ವೃಂದಾವನಾಖ್ಯಾನ ಗ್ರಂಥವಂತು ಅವರ ಉಸಿರೇ ಆಗಿತ್ತು. ಅದರಲ್ಲಿ ಬರುವ ಚ, ತು ಅನೇಕ ಅವ್ಯಯಗಳ ಔಚಿತ್ಯ ಬಲ್ಲವರಾಗಿದ್ದರು. ಶ್ರೀಗುರುರಾಜರು ಈ ಶಬ್ದವನ್ನು ಯಾಕೆ ಬಳಸಿದ್ದಾರೆ, ಅದರ ಕಾರಣವೇನು ಎಂದು ಚೆನ್ನಾಗಿ ಮನನ ಮಾಡಿಕೊಂಡಿದ್ದರು. ಉದಾಹರಣೆಗೆ ಒಂದು ನೋಡುವುದಾದರೆ **ಮಂದಸ್ಮಿತಧರಂ ಸಾಂದ್ರಾನಂದ ಸಂದೋಹಮಂದಿರಮ್ ಶತಾನಂದಗುರುಂ ಸಾಂದ್ರಂ ಹಯಸತ್ಕಂಧರಂ ಸ್ಮರ ಎಂಬ ಶ್ಲೋಕದಲ್ಲಿ** (ಅಧ್ಯಾಯ 12, ಶ್ಲೋಕ 69) ಹಯಸತ್ಕಂಧರಂ ಶಬ್ದ ಬಳಸಿದ್ದಾರೆ. ಬೇರೆ ಯಾವುದೇ ಶಬ್ದ, ಹಯಾನನ, ಹಯವದನ ಬಳಸಬಹುದಾಗಿತ್ತು. ಇದರ ಔಚಿತ್ಯ ಶ್ರೀ ವಿಶ್ವೋತ್ತಮರು ಬಲ್ಲವರಾಗಿದ್ದರು. ದೇವಿ ಭಾಗವತ ಎಂಬ ಪುರಾಣದಲ್ಲಿ ಒಂದು ಕಥೆ ಬರುತ್ತದೆ. ಅದರಲ್ಲಿ ಶ್ರೀವಿಷ್ಣು ತನ್ನ ಶಾರ್ಙ್ಗಧನಸ್ಸನ್ನು ತಲೆ ಬುಡದಲ್ಲಿಟ್ಟು ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ ಒಂದು ಹುಳ ಬಂದು ಧನಸ್ಸಿನ ಜ್ಯಾವನ್ನು ತುಂಡು ಮಾಡಿತು. ಅದರ ವೇಗಕ್ಕೆ ವಿಷ್ಣುವಿನ ಕುತ್ತಿಗೆ ಹಾರಿಹೋಯಿತು. ಬ್ರಹ್ಮಾದಿಗಳು ಕಂಗಲಾದರು. ಆ ಕ್ಷಣದಲ್ಲಿ ಶ್ರೀದೇವಿಯನ್ನು ಮೊರೆ ಹೋಗಲು ಅಲ್ಲೇ ಇದ್ದ ಒಂದು ಕುದುರೆ ತಲೆಯನ್ನು ತಂದು ವಿಷ್ಣುವಿಗೆ ಜೋಡಿಸಲಾಯಿತು. ಆಗ ವಿಷ್ಣುವು ಹಯವದನ ರೂಪವನ್ನು ಹೊಂದಿ, ಹಯವದನನಾಗಿ ಕಾಣಿಸಿಕೊಂಡ ಎಂದು ಆ ಪುರಾಣದ ಅಭಿಪ್ರಾಯ. ಶ್ರೀ ಗುರುರಾಜರಿಗೆ ಇದು ಸರಿ ಕಾಣಲಿಲ್ಲ. ಯಾಕೆಂದರೆ ನನ್ನ ಸ್ವಾಮಿ ಅಪ್ರಾಕೃತ, ಅಚ್ಛೇದ್ಯ, ಅಭೇದ್ಯ. ಯಾವತ್ತೂ ಇದು ಕೂಡುವುದಿಲ್ಲ. ಅವನು ಸತ್

ಶಬ್ದ ವಾಚ್ಯ. ಸಚ್ಚಿದಾನಂದ ರೂಪ, ಆದ್ದರಿಂದ ಗುರುರಾಜರು ಹಯಸತ್ಕಂಧರಂ ಎಂಬ ಶಬ್ದವನ್ನೂ ಬಳಸಿದ್ದಾರೆ ಎಂದು ಶ್ರೀ ವಿಶ್ವೋತ್ತಮರು ತಿಳಿಸಿದ್ದರು. ಆಖ್ಯಾನ ನಿರಂತರ ಅಧ್ಯಯನ ಹಾಗೂ ಶ್ರೀಗುರುರಾಜರ ಅನುಗ್ರಹವಿಲ್ಲದಿದ್ದರೆ ಇಂತಹ ವಿಶೇಷ ಅರ್ಥ ಹೊಳೆಯುವುದೇ ಇಲ್ಲ. ಇದು ಅವರ ಚಿಂತನಾಕ್ರಮದ ಒಂದು ಉದಾಹರಣೆ ಅಷ್ಟೇ. ಇಂತಹ ಅನೇಕ ಪ್ರಕಾರದ ಚಿಂತನೆ ಅವರಲ್ಲಿತ್ತು.

ಇನ್ನು ಭಕ್ತರಿಗೆ ಮಾಡಿದ ಅನುಗ್ರಹವಂತು ಇಷ್ಟೇ ಅಂತ ಹೇಳಲಿಕ್ಕೇ ಆಗುವುದಿಲ್ಲ. ಒಬ್ಬೊಬ್ಬ ಭಕ್ತರದ್ದು ವಿಚಿತ್ರ ಅನುಭವ. ಒಂದೆರಡು ಪ್ರಕರಣಗಳಲ್ಲಿ ನೋಡೋಣ. ಕೋಟೇಶ್ವರ ಮಾಗಣೆಯ ಒಬ್ಬ ಭಕ್ತರ ಸೋದರಮಾವ ಮನೆ ಬಿಟ್ಟು ಹೋಗಿದ್ದರು. ಹನ್ನೆರಡಕ್ಕೂ ಮಿಗಿಲಾದ ವರ್ಷ ಕಳೆದರೂ ಅವರ ಸುಳಿವಿಲ್ಲ. ಹನ್ನೆರಡು ವರ್ಷ ಕಾಣದಿದ್ದರೆ ಅವರ ದಿನ ಕರ್ಮಗಳನ್ನು ಮಾಡಬೇಕೆಂದು ವಿಧಿ. ಒಮ್ಮೆ ಆ ಭಕ್ತರು ಶ್ರೀವಿಶ್ವೋತ್ತಮರನ್ನು ದರ್ಶನಗೈದು, ನಮ್ಮ ಸೋದರಮಾವ ಮನೆ ಬಿಟ್ಟು ಹೋಗಿದ್ದಾರೆ. ಅವರ ದಿನ ಕರ್ಮ ಮಾಡಬೇಕಾ ಹೇಗೆ ಎಂದು ಕೇಳಿದರು. ಆಗ ಸ್ವಾಮಿಗಳು ಹೇಳಿದರು, ಬೇಡ ಅವರನ್ನು ಶ್ರೀತ್ರಿವಿಕ್ರಮ ರಥೋತ್ಸವಕ್ಕೆ ಕರೆದುಕೊಂಡು ಬನ್ನಿ ಎಂದು ಮಂತ್ರಾಕ್ಷತೆ ಕೊಟ್ಟರು. ಇಲ್ಲದ ವ್ಯಕ್ತಿಯನ್ನು ಎಲ್ಲಿಂದ ಕರೆತರುವುದು ಎಂದು ಚಿಂತಾಕ್ರಾಂತರಾಗಿ ಮನೆಗೆ ಹಿಂದಿರುಗಿದರು. ಒಂದು ಮಳೆಗಾಲದ ರಾತ್ರಿ ಸಮಯ. ಮನೆಯ ಬಾಗಿಲನ್ನು ಯಾರೋ ಬಡಿಯುತ್ತಾ ಇದ್ದಾರೆ ಎಂದು ಬಾಗಿಲು ತೆಗೆದರೆ, ಅಲ್ಲಿ ಪ್ರತ್ಯಕ್ಷವಾಗಿ ನಿಂತಿದ್ದು ಅವರ ಸೋದರಮಾವ. ಒಳಗೆ ಬರಮಾಡಿಕೊಂಡು ನಿನ್ನ ತಂದೆ ತಾಯಿ ಸತ್ತಾಗ ನೀನು ಬರಲಿಲ್ಲ, ಈಗ ಹೇಗೆ ಬಂದೆ ಅಂತ ವಿಚಾರಿಸಿದರೆ ಅವರು ಹೇಳಿದ ವಿಷಯ ವಿಚಿತ್ರವಾಗಿತ್ತು. ನಿತ್ಯವು ಅವರ ಸ್ವಪ್ನದಲ್ಲಿ ಯಾರೋ ಬಂದು ಕೋಲು ತೆಗೆದುಕೊಂಡು ಹೊಡೆಯುತ್ತಾ ಹೇಳುವರು ಅಂತೆ, ನೀನು ಮನೆಗೆ ಹೋಗು ನೀನು ಮನೆಗೆ ಹೋಗು, ನೋಡಿ ನಮ್ಮ ಸ್ವಾಮಿಗಳ ಮಹಿಮೆ ಮುಂದಾಗುವ ಘಟನೆಯನ್ನು ಮೊದಲೇ ತಿಳಿಸಿದ್ದು. ಈ ಪ್ರಕರಣ ಶ್ರೀಗುರುರಾಜರ ಜೀವನದಲ್ಲಿ ಕೊಲ್ಲೂರು ಮೂಕಾಂಬಿಕೆ ಸನ್ನಿಧಾನದ ಘಟನೆಗೆ ಹೋಲಿಕೆ ಇದೆ. ನಂತರ ಅವರನ್ನು ಶ್ರೀತ್ರಿವಿಕ್ರಮ ರಥೋತ್ಸವಕ್ಕೆ ಕರೆದುಕೊಂಡು ಹೋಗಿ ಸ್ವಾಮಿಗಳಿಂದ ಅನುಗ್ರಹ ಮಂತ್ರಾಕ್ಷತೆ ಕೊಡಿಸಿದರು.

ಇದೇ ಕುಟುಂಬದವರು ವಾಸಕ್ಕೆ ಯೋಗ್ಯವಾದ ಮನೆ ಖರೀದಿ ಮಾಡಬೇಕೆಂದುಕೊಂಡು ಬೆಂಗಳೂರಿನಲ್ಲಿ ಹುಡುಕುತ್ತಾ ಇದ್ದರು. ಯಾರೋ ಒಬ್ಬರು ಇವರಿಗೆ ಹೇಳಿದರು ನೀವು ಶ್ರೀ ವಿಶ್ವೋತ್ತಮತೀರ್ಥರಿಂದ ಮಂತ್ರಾಕ್ಷತೆ ತೆಗೆದುಕೊಳ್ಳಿ, ಒಳ್ಳೆ ಮನೆ ಸಿಗುತ್ತೆ. ಅವರು ಹಲವರ ಒತ್ತಾಯಕ್ಕೆ ಸ್ವಾಮಿಗಳ ಸನ್ನಿಧಾನಕ್ಕೆ ಬಂದು ತಮ್ಮ ಅಪೇಕ್ಷೆ ವಿನಿಂತಿಸಿಕೊಂಡರು. ಆಗ ತಕ್ಷಣ ಸ್ವಾಮಿಗಳು

ನಿಮ್ಮ ಗೋಪಾಲಕೃಷ್ಣನಿಗೆ ಮನೆ ಸರಿ ಇಲ್ಲ. ಅದನ್ನು ಸರಿ ಮಾಡಿ ನಿಮಗೆ ಮನೆ ಸಿಗುತ್ತೆ. ಅಂದರೆ, ಅವರ ಮನೆದೇವರಾದ ಗೋಪಾಲಕೃಷ್ಣನ ಗುಡಿ ಜೀರ್ಣಾವಸ್ಥೆಯಲ್ಲಿತ್ತು. ಅದನ್ನು ಸ್ವಾಮಿಗಳು ಎಂದೂ ನೋಡಿರಲಿಲ್ಲ. ಹಾಗೆ ಕುಳಿತಲ್ಲಿಂದಲೇ ಹೇಳಿದರು. ಈ ಭಕ್ತರಿಗೆ ಆಶ್ಚರ್ಯವಾಯಿತು. ಕೂಡಲೇ ಜೀರ್ಣೋದ್ಧಾರ ಮಾಡಿಸಿದರು. ಆ ಕೂಡಲೇ ಅವರಿಗೆ ಎನ್. ಆರ್. ಕಾಲೊನಿಯಲ್ಲೇ ಮೂಲೆ ನಿವೇಶನದಲ್ಲಿರುವ ಎರಡು ಅಂತಸ್ತು ಮನೆ ಖರೀದಿ ಆಯಿತು. ಸ್ವಲ್ಪ ದಿನಗಳ ನಂತರ ಮನೆ ಕೊಟ್ಟವನು ಬಂದು ಹೇಳುತ್ತಾ ಇದ್ದ, ನಾನು 13 ಲಕ್ಷಕ್ಕೆ ಕಮ್ಮಿ ಕೊಡುವುದಿಲ್ಲ ಎಂದಿದ್ದೆ. ಆದರೆ ನಾನು ಹೇಗೆ ನಿಮಗೆ 11 ಲಕ್ಷಕ್ಕೆ ಕೊಟ್ಟೆ, ನೋಡಿ ಭೂತರಾಜರ ವ್ಯಾಪಾರ. ಇಂತಹ ಮಹಿಮೆಗಳು ಬಹಳಷ್ಟು ಇದೆ. ಇದರಿಂದಲೇ ಗೊತ್ತಾಗುತ್ತೆ ಇವರು ಶ್ರೀಗುರುರಾಜರ ಕಾರುಣ್ಯದ ಕೂಸು. ಇಂತಹ ಶ್ರೀಗುರುರಾಜರ ಕಾರುಣ್ಯಕ್ಕೆ ಪಾತ್ರರಾದ ನಮ್ಮ ಸ್ವಾಮಿಗಳು ನಮ್ಮೆಲ್ಲರ ಶ್ರೀಗುರುರಾಜರ ಅನುಗ್ರಹ ಮಾಡಿಸಿ ನಮ್ಮಗಳನ್ನು ಸನ್ಮಾರ್ಗದಲ್ಲಿ ಸಾಧನೆ ಮಾಡಿಸಲಿ ಎಂದು ಅನಂತಕೋಟಿ ನಮನಗಳ ಮೂಲಕ ಪ್ರಾರ್ಥಿಸುತ್ತೇನೆ.

## ಶ್ರೀಗುರುರಾಜವಿರಚಿತ ಶ್ರೀಮದ್ಭಾಗವತಾನುಕ್ರಮಣಿಕಾ

ಚಿತ್ರಕೇತು ಸಮಾಖ್ಯಾನಂ ಪುತ್ರಶೋಕಸ್ತಥೈವ ಚ ।
ಮಂತ್ರೋಪದೇಶಾದ್ರಾಜ್ಞಸ್ತು ನಾರದಸ್ಯ ಜಲೇ ತಥಾ ॥

ವಿದ್ಯಾಧರಾಧಿಪತ್ಯಂ ಚ ರುದ್ರ ಹಾಸ್ಯಮತಃ ಪರಮ್ ।
ಪಾರ್ವತೀಶಾಪದಾನಂ ಚ ಸ್ವಲೋಕಗಮನಂ ಸ್ಮೃತಮ್ ॥

ವ್ರತಂ ಪುಂಸವನಂ ಪ್ರೋಕ್ತಂ ಮರುತಾಂ ಚ ಸಮುದ್ಭವಃ ।
ಏಕೋನವಿಂಶತಿರಧ್ಯಾಯಾಃ ಷಷ್ಠೇಽಸ್ಮಿತ ಸಂಪ್ರಕೀರ್ತಿತಾಃ ॥

ಧರ್ಮನಾರದಸಂವಾದೋ ಭಕ್ತೇಃ ಪ್ರಾಧಾನ್ಯಕೀರ್ತನಮ್ ।
ಹಿರಣ್ಯಕಶಿಪೋರ್ದ್ವೇಷಃ ಪ್ರಹ್ಲಾದೇ ಕೀರ್ತಿತಾ ಕ್ರಮಾತ್ ॥

ಮಾತುಸ್ತತೋಪದೇಶಶ್ಚ ತಪಶ್ಚರ್ಯಾ ಪ್ರಕೀರ್ತಿತಾ ।
ಶಂಡಾಮರ್ಕೋಪದೇಶಶ್ಚ ಸ್ವವಿದ್ಯಾಪ್ರತಿಪಾದನಮ್ ॥

# ಶ್ರೀಮದ್ಭಾವಿಸಮೀರ ವಿರಚಿತ ಹರಿಭಕ್ತಿಲತಾ ೨೨

ವಿ॥ ರವಿ ಬದರಿನಾಥ್
9164500017

**ಅದ್ಯಾಪಿ ರುದ್ರಾಯೋಚ್ಛಿಷ್ಟಾಹುತಿದಾಃ ಶ್ರುತಿಕೋವಿದಾಃ ।**
**ಹಸ್ತಂ ಪ್ರಕ್ಷಾಲಯಂತ್ಯೇತದುಚ್ಛಿಷ್ಟಂ ನೇತಿ ಕೋ ವದೇತ್ ॥ 343 ॥**

ಇಂದಿಗೂ ಕೂಡ ವೇದವಿದ್ವಾಂಸರು ಯಜ್ಞದಲ್ಲಿ ರುದ್ರನಿಗೆ ಉಚ್ಛಿಷ್ಟ ಆಹುತಿಯನ್ನು ನೀಡಿದ ನಂತರದಲ್ಲಿ ಕೈಯನ್ನು ತೊಳೆದುಕೊಳ್ಳುತ್ತಾರೆ. ರುದ್ರನಿಗೆ ಆಹುತಿಯನ್ನು ಕೊಟ್ಟ ಮೇಲೆ ಇಂದಿಗೂ ಕೈತೊಳೆದುಕೊಳ್ಳುವುದರಿಂದ ರುದ್ರದೇವರಿಗೆ ಕೊಟ್ಟ ಆಹುತಿಯು ಉಚ್ಛಿಷ್ಟವಲ್ಲವೆಂದು ಯಾರು ಹೇಳುವರು?

**ದಿಗಂಬರಶ್ಚ ಜಟಿಲಃ ತೀರ್ಥಸೇವೀ ನಿರಂತರಮ್ ।**
**ಭಿಕ್ಷಾನ್ನಭುಕ್ ಚಾಕ್ಷಮಾಲಾಂ ಬಿಭ್ರಾಣೋ ವ್ಯಾಘ್ರಚರ್ಮಣಿ ।**
**ಉಪವಿಶ್ಯ ಜಪನ್ಮಂತ್ರಂ ಶಿಷ್ಯಾಯೋಪದಿಶನ್ಮನುಮ್ ॥ 344 ॥**

ಶಿವನು ದಿಗಂಬರನಾಗಿ ಜಟೆಯನ್ನು ಧರಿಸಿ ತೀರ್ಥಕ್ಷೇತ್ರಗಳಲ್ಲಿ ಸಂಚರಿಸುತ್ತಾ ಯಾವಾಗಲೂ ಇರುವನು. ಹಾಗೆಯೇ ಭಿಕ್ಷಾನ್ನವನ್ನು ತಿನ್ನುತ್ತಾ ರುದ್ರಾಕ್ಷಿಮಾಲೆಯನ್ನು ಧರಿಸಿ ಹುಲಿಯ ಚರ್ಮದ ಮೇಲೆ ಕುಳಿತು ರಾಮತಾರಕ ಮಂತ್ರವೇ ಮೊದಲಾದ ವಿಷ್ಣುಮಂತ್ರಗಳನ್ನು ಸದಾ ಜಪಿಸುತ್ತಾ ತನ್ನ ಶಿಷ್ಯರಿಗೂ ವೈಷ್ಣವ ಮಂತ್ರಗಳನ್ನು ಉಪದೇಶ ಮಾಡುವನು.

**ತನ್ಮಂತ್ರದೇವತಾಂ ಧ್ಯಾಯನ್ ವ್ಯಾಖ್ಯಾಕಾಲೇ ಚ ಮಾಲಿಕಾಮ್ ।**
**ದ್ವಿಗುಣೀಕೃತ್ಯ ಕರ್ಣೇ ವಾ ಕಂಠೇ ವಾ ಧಾರಯನ್ ಸದಾ ॥ 345 ॥**

**ಚರನ್ ಪರಮಹಂಸೋ ಯಃ ಸ ಗುರುರ್ನೇತಿ ಕೋ ವದೇತ್ ।**
**ತನ್ಮಂತ್ರದೇವತಾಂ ತಾಂ ತು ದೇವೋ ನೇತಿ ಚ ಕೋ ವದೇತ್ ॥ 346 ॥**

ಆ ಮಂತ್ರ ಪ್ರತಿಪಾದ್ಯ ದೇವತೆಯಾದ ರಾಮ–ನರಸಿಂಹಾದಿ ರೂಪಗಳನ್ನು ಧ್ಯಾನಿಸುತ್ತಾ, ವ್ಯಾಖ್ಯಾನ ಮಾಡುವ ಸಮಯದಲ್ಲಿ ರುದ್ರಾಕ್ಷಿಮಾಲೆಯನ್ನು ಎರಡು

ಸುತ್ತುಮಾಡಿ ಕಿವಿಯಲ್ಲಿ–ಕುತ್ತಿಗೆಯಲ್ಲಿ ಧಾರಣೆ ಮಾಡಿದವನಾಗಿ ಯಾವಾಗಲೂ ಸಂಚಾರ ಮಾಡುತ್ತಿರುವ ಪರಮಹಂಸನಾದ ಆ ರುದ್ರದೇವರನ್ನು ಯಾರು ತಾನೇ ಗುರುವೆಂದು ಹೇಳುವುದಿಲ್ಲ? ಅಂತಹ ಜಗದ್ಗುರುವಾದ ಮಹಾರುದ್ರದೇವರೇ ಸದಾ ಜಪಿಸುತ್ತಿರುವ ಮಂತ್ರಗಳಿಂದ ಪ್ರತಿಪಾದ್ಯನಾದ ದೇವತೆ ಶ್ರೀಹರಿಯನ್ನು ದೇವರೆಂದು ಯಾರು ಹೇಳದಿರುವರು? (ಹೇಳುವರೆಂದು ಅಭಿಪ್ರಾಯ)

**ಏವಂ ಚ ಕಾಶ್ಯಾಂ ಸತತಂ ಜಪನ್ ರಾಮಷಡಕ್ಷರಮ್ ।**
**ಧ್ಯಾಯಂಶ್ಚ ತಂ ಹೃದಿ ಸದಾ ತಾರಕಬ್ರಹ್ಮಸಂಜ್ಞಿತಮ್ ॥ 347 ॥**

ಹೀಗೆ ರುದ್ರನು ಕಾಶಿಯಲ್ಲಿ ಹೃದಯದಲ್ಲಿ ಯಾವಾಗಲೂ ರಾಮ ಷಡಕ್ಷರ ಮಂತ್ರವನ್ನು ಧ್ಯಾನಿಸುತ್ತಿರುತ್ತಾನೆ. ತಾರಕ ಬ್ರಹ್ಮ ಮಂತ್ರವನ್ನು ಸದಾ ಜಪಿಸುತ್ತಿರುತ್ತಾನೆ.

**ಜಪಕಾಲೇ ತೂಪವಿಷ್ಟೋ ಭೂಮೌ ಶಾರ್ದೂಲಚರ್ಮಣಿ ।**
**ಆವರ್ತಯನ್ ಸ್ಫಾಟಿಕಾಕ್ಷಮಾಲಾಂ ದಕ್ಷಕರಾಂಗುಲೌ ॥ 348 ॥**

ಶಿವನು ಜಪಮಾಡುವ ಕಾಲದಲ್ಲಿ ಭೂಮಿಯ ಮೇಲೆ ಹುಲಿಯ ಚರ್ಮ ವನ್ನು ಹಾಕಿಕೊಂಡು, ಅದರ ಮೇಲೆ ಕುಳಿತುಕೊಂಡು ಬಲಗೈಯಿಂದ ಸ್ಫಟಿಕದ ಅಕ್ಷಮಾಲೆ ಯನ್ನು ತಿರುಗಿಸುತ್ತಾ ತಾರಕ ರಾಮಮಂತ್ರವನ್ನು ಜಪಮಾಡುತ್ತಾ ಇರುತ್ತಾನೆ.

**ವ್ಯಾಖ್ಯಾಕಾಲೇ ಚ ತಾಂ ಕರ್ಣೇ ದ್ವಿಗುಣೀಕೃತ್ಯ ಧಾರಯನ್ ।**
**ದಿಗಂಬರಶ್ಚ ಜಟಿಲಃ ತೀರ್ಥಶೋಭಿತಮಸ್ತಕಃ ॥ 349 ॥**

ವ್ಯಾಖ್ಯಾನ ಮಾಡುವ ಕಾಲದಲ್ಲಿ ಆ ಜಪಮಾಲೆಯನ್ನು ಎರಡು ಎಳೆಯನ್ನಾಗಿ ಮಾಡಿ ಕಿವಿಗೆ ಹಾಕಿಕೊಂಡಿರುತ್ತಾರೆ. ದಿಗಂಬರರಾಗಿಯೂ, ಜಟಾಧಾರಿಗಳಾಗಿಯೂ ತ್ರಿವಿಕ್ರಮನ ಪಾದತೀರ್ಥವಾದ ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿದವರೂ ಆಗಿರುತ್ತಾರೆ.

**ವೀಥ್ಯಾಂ ವೀಥ್ಯಾಂ ಅಟಶ್ಚಾಂಪಿ ಸತಾಂ ಮಂತ್ರೋಪದಿತ್ಸಯಾ ।**
**ಮೃತಿಕಾಲೇ ವಿಮುಕ್ತ್ಯರ್ಥಂ ಕರ್ಣೇ ಕರ್ಣೇ ಜಪನ್ ಮನುಮ್ ॥ 350 ॥**

ಸಜ್ಜನರಿಗೆ ರಾಮತಾರಕಮಂತ್ರವನ್ನು ಉಪದೇಶ ಮಾಡುವ ಇಚ್ಛೆಯಿಂದ ಬೀದಿ–ಬೀದಿಗಳಲ್ಲಿ ಅಲೆಯುತ್ತಿರುವನು. ಹಾಗೆಯೇ, ಭಕ್ತರಿಗೆ ಸಂಸಾರದಿಂದ ಬಿಡುಗಡೆಯಾಗಿ ಮೋಕ್ಷ ದೊರಕಲೆಂದು ಅವರ ಮರಣಕಾಲದಲ್ಲಿ ಭಕ್ತರ ಕಿವಿಗಳಲ್ಲಿ ರಾಮತಾರಕ ಮಂತ್ರವನ್ನು ಜಪಿಸುತ್ತಿರುವನು.

# ಶ್ರೀಗುರುರಾಜಕೃತ ಪಾಷಂಡಮತಖಂಡನ

**ವಿ। ವಾದಿರಾಜಾಚಾರ್ಯ ಜಮಖಂಡಿ**
ಅಧ್ಯಾಪಕರು, ಭಾವಿಸಮೀರ ಗುರುಕುಲ
9483354612

**ಜೀವತಃ ಚರ್ಮ ನಾಶುದ್ಧಂ ಅಶುದ್ಧಂ ಮೃತಕಸ್ಯ ಚೇತ್ ।**
**ಪೂತಾಽಪೂತಾವಿಭಾಗೋಽಸ್ತೀತ್ಯಾಗತಂ ತರ್ಹಿ ಚರ್ಮಸು ॥ 57 ॥**

ವ್ಯಕ್ತಿಯು ಬದುಕಿದ್ದಾಗ ಅವನ ಚರ್ಮ ಸ್ಪರ್ಶಯೋಗ್ಯ. ಪ್ರಾಣ ಹೋದರೆ ಚರ್ಮವು ಅಶುದ್ಧ ಅಂದರೆ ಸ್ಪರ್ಶಯೋಗ್ಯವಲ್ಲ. ಆದ್ದರಿಂದಲೇ ಸತ್ತ ಜಿಂಕೆಯ ಚರ್ಮ ಅಸ್ಪೃಶ್ಯವಾದ ಪದಾರ್ಥ ಎಂದು ಜೈನವಾದಿಯು ಹೇಳುತ್ತಾನೆ. ಆದರೆ ಅವನು ಹೇಳುವ ಈ ಎರಡು ನಿಯಮಗಳೂ ಸರಿಯಲ್ಲ. ಯವನ, ಚಾಂಡಾಲರೂ ಜೀವಂತವಾಗಿದ್ದಾಗ ಅವರ ಚರ್ಮವೂ ಸ್ಪರ್ಶಯೋಗ್ಯವಾಗಬೇಕಾದೀತು. ಆದ್ದರಿಂದ, ಯಾವುದು ಸ್ಪರ್ಶಯೋಗ್ಯವೆಂದು ವಿಹಿತವಾಗಿದೆಯೋ ಅವೆಲ್ಲವೂ ಗ್ರಾಹ್ಯ ಎನ್ನಬೇಕು. ಕೃಷ್ಣಾಜಿನವೂ ವಿಹಿತವಾದ್ದರಿಂದ ಸ್ಪೃಶ್ಯವಾಗುತ್ತದೆ. ಆದ್ದರಿಂದ, ಆಚಾರ ವಿಷಯದಲ್ಲಿ ಯುಕ್ತಿಸಂಚಾರ ಸರ್ವಥಾ ಸಲ್ಲ.

**ಪೂರ್ವೇಷಾಂ ವಚನಂ ಗ್ರಾಹ್ಯಂ ಯುಕ್ತಿಃ ಕುತ್ರೋಪಯುಜ್ಯತೇ ।**
**ನಾಲಿಕೇರಸವಂ ಹೇಯಂ ಪೇಯಂ ತತ್ಫಲಜೋದಕಮ್ ॥ 58**

ಆಚಾರ ಹಾಗೂ ಅನಾಚಾರಗಳನ್ನು ಶಿಷ್ಟರ ಮಾತನ್ನು ಆಧರಿಸಿ ತೀರ್ಮಾನಿಸಬೇಕು ಹೊರತು ಯುಕ್ತಿಗಳನ್ನು ಬಳಸಿ ತೀರ್ಮಾನ ಮಾಡಬಾರದು. ಇಲ್ಲವೆಂದರೆ ತೆಂಗಿನಮರದಿಂದ ನಿರ್ಮಿತವಾದ ಮದ್ಯವು ಪೇಯವಾಗಿ ತೆಂಗಿನ ಫಲೋದಕವೂ (ಎಳನೀರು) ಹೇಯವಾಗಬೇಕಾದೀತು.

**ಯದಿ ಶಂಖೋದಕಂ ತ್ಯಾಜ್ಯಂ ಕರಸ್ಥಂ ಕೇನ ಪೂಜ್ಯತೇ ।**
**ಅಸೃಕ್‌ಪೂರ್ಣಾರ್ದ್ರಚರ್ಮಸ್ಥ ಜಲಕಲ್ಪಮಬುದ್ಧಿನಾ ॥ 59**

ಶಂಖವು ಜಲಚರಪ್ರಾಣಿಯ ಅವಯವ ಆದ್ದರಿಂದ ಶಂಖದಲ್ಲಿ ಇರುವ ನೀರು ಅಗ್ರಾಹ್ಯ ಎಂದು ಜೈನರ ವಾದ ಸರಿಯಲ್ಲ. ಏಕೆಂದರೆ ಗಂಡೂಷಕ್ಕಾಗಿ ಕೈಯಲ್ಲಿ

ಹಾಕಿಕೊಂಡ ನೀರು ಕೂಡ ಅಗ್ರಾಹ್ಯವಾಗಬೇಕಾದೀತು. ಹಸ್ತಸಂಬಂಧಿಯಾದ ಚರ್ಮವೂ ಕೂಡ ರಕ್ತವೇ ಮೊದಲಾದ ದುಷ್ಟವಾದ ಪದಾರ್ಥಗಳಿಂದ ಕೂಡಿದೆ. ಆಚರ್ಮಕ್ಕೆ ನೀರಿನ ಸಂಬಂಧವಾದರೆ ಆ ನೀರೂ ಅಗ್ರಾಹ್ಯವಾಗಬೇಕಾದೀತು. ಇದನ್ನೊಪ್ಪಿದರೆ ನೀನು ಮಾಡುವ ಗಂಡೂಷಾದಿಕರ್ಮಗಳು ಸರಿಯಾದುದಲ್ಲ ಎಂದಾಗುತ್ತದೆ.

**ನಖಾನಾಂ ದಂತಪಂಕ್ತೀನಾಂ ಅಸ್ಥ್ನಾಂಸಂಗೇನ ದೂಷಿತಮ್ ।**
**ಜಲಂ ನಿಷೇವ್ಯಸೇ ಕಸ್ಮಾದ್ ನ ಹಿ ಜಿಹ್ವಾ ಹಿರಣ್ಮಯೀ ॥ 60**

ಅದೇ ರೀತಿ ಅಸ್ಥಿರೂಪಗಳಾದ ಉಗುರುಗಳ ಹಾಗು ದಂತಗಳ ಸಂಬಂಧ ಹೊಂದಿದ ನೀರನ್ನು ಕುಡಿಯುತ್ತಿರುವುದು ಅಯೋಗ್ಯವಾಗಬೇಕಾದೀತು. ಅದೇ ರೀತಿ ಉಗುರು ಹಾಗೂ ದಂತಗಳ ಸಂಬಂಧವಾಗದೆ ನೀರನ್ನು ಕುಡಿದರೂ ನಾಲಿಗೆಗೆ ನೀರಿನ ಸ್ಪರ್ಶ ಆಗಲೇಬೇಕು. ಆವಾಗ ಜಲವು ಅಯೋಗ್ಯವೇ ಎನ್ನಬೇಕು. ಯಾರ ನಾಲಿಗೆಯೂ ಬಂಗಾರವಲ್ಲ ಹೊರತು ಚರ್ಮವೇ ಆಗಿದೆ.

**ಯದಾರ್ಯಾಚಾರತಃ ಕಾರ್ಯಂ ತನ್ನ ವಾರ್ಯಂ ಕದಾಚನ ।**
**ಗೋಮಯೈರ್ಲಿಪ್ಯತೇ ಭೂಮಿಃ ನ ಜಾತ್ವಪಿ ಗುರೋರ್ಮಲೈಃ ॥ 61**

ಆದ್ದರಿಂದ ಯಾವುದು ಶಿಷ್ಟರಿಂದ, ಸಂಪ್ರದಾಯದ ಪರಂಪರೆಯಿಂದ ಬಂದಿದೆಯೋ ಅದೆಲ್ಲವೂ ಆಚರಣೆಗೆ ಯೋಗ್ಯವೇ ಎಂದು ಒಪ್ಪಲೇಬೇಕು. ಲೋಕದಲ್ಲಿ ಗುರುಗಳ ಮಲವು ಮತ್ತು ಗೋವಿನ ಮಲವು ಎರಡೂ ಮಲಗಳಾದರೂ ಭೂಮಿಯ ಶುದ್ಧಿಗಾಗಿ ಗೋಮಯವೇ ಗ್ರಾಹ್ಯ ಹೊರತು ಗುರುಗಳ ಮಲವಲ್ಲ. ಏಕೆಂದರೆ, ಅದೇ ಶಿಷ್ಟಾಚಾರದಿಂದ ಬಂದದ್ದು. ಹಾಗೆಯೇ ಅಸ್ಥಿಯ ಸಂಪರ್ಕವಾದರೂ ಶಂಖೋದಕ ಗ್ರಾಹ್ಯವೇ.

**ಹವಿಃಶೇಷೇ ನ ದೋಷಶ್ಚೇತ್ ಮಾಂಸಮನ್ಯಚ್ಚ ಸೇವ್ಯತಾಮ್ ।**
**ಇತಿ ಚೋದ್ಯಂ ನ ವೈ ಹೃದ್ಯಂ ಮರ್ಯಾದಾಭಂಗಕಾರಣಮ್ ॥ 62**

**ಮಾಂಸಮಧ್ಯಾಗತಂ ದುಗ್ಧಂ ಪೀಯತೇ ಪಾಂಡುರಂ ಯದಿ ।**
**ಸೇವಸ್ವ ಪೂಯಂ ತತ್ರತ್ಯಂ ಇತಿ ಚೋದ್ಯೇ ಕಿಮುತ್ತರಮ್ ॥ 63**

ವೈದಿಕರನ್ನು ಕುರಿತು ಜೈನನ ಆಕ್ಷೇಪ ಹೀಗಿದೆ. ಯಾಗದಲ್ಲಿ ಪ್ರಾಣಿಯನ್ನು ಕೊಂದು ಹೋಮ ಮಾಡಿ ಉಳಿದ ಭಾಗವು ಸ್ವೀಕಾರಯೋಗ್ಯವಾದರೆ ಬೇರೆಯಾದ ಮಾಂಸವನ್ನು ಯಾಕೆ ಸ್ವೀಕಾರ ಮಾಡಬಾರದು ಎಂದು. ಇದು ಲೋಕನೀತಿ ವಿರುದ್ಧವಾಗುತ್ತದೆ. ಎಮ್ಮೆಯ ಕೆಚ್ಚಲಿನಿಂದ ಬಂದ ಹಾಲು ಸ್ವೀಕರಿಸಲು ಯೋಗ್ಯ. ಎಮ್ಮೆಯ ಕೆಚ್ಚಲು ರೋಗಗ್ರಸ್ತವಾದರೆ ಅದರ ಹಾಲು ಹಾಲಿನಂತೆ ಶುಭ್ರವಾಗಿ ತೋರುವ ಕೀವು. ಆದ್ದರಿಂದ ಸ್ವೀಕರಿಸಲು ಯೋಗ್ಯವಲ್ಲ. ಆದರೆ ಅದೂ ಎಮ್ಮೆಯ ಕೆಚ್ಚಲಿನಿಂದ ಬಂದುದು ಎಂದ ಮಾತ್ರಕ್ಕೆ ಕುಡಿಯಲು ಯೋಗ್ಯವಾಗಬೇಕಾದೀತು. ಆದ್ದರಿಂದ, ಹವಿಃಶೇಷಕ್ಕಿಂತಲೂ ಭಿನ್ನವಾದ ಮಾಂಸವು ಭಕ್ಷಣೆಗೆ ಯೋಗ್ಯವಲ್ಲ.

**ದುರಾಶಯಾ ಮಹಿಷ್ಯಂಗಜಾತಂ ಸರ್ಪಿರ್ನಿಷೇವ್ಯತೇ ।**
**ವರಾಹತನುಸಂಭೂತಂ ಕ್ಷೀರಂ ಕಸ್ಮಾನ್ನ ಭುಜ್ಯತೇ ॥ 64**

ಅದೇ ರೀತಿ ಪ್ರಾಣಿಯಾದ ಎಮ್ಮೆಯ ಹಾಲಿನಿಂದ ನಿರ್ಮಾಣಮಾಡಿದ ತುಪ್ಪವು ಸ್ವೀಕಾರಾರ್ಹ ಅಂದ ಮಾತ್ರಕ್ಕೆ ಪ್ರಾಣಿಯಾದ ವರಾಹದ ಕ್ಷೀರವೂ ಕೂಡ ಪೇಯವಾಗುವುದೇ?

**ಪೀಯತೇ ಮಹಿಷೀಕ್ಷೀರಂ ಶುನೀನಾಂ ಕಿಂ ನ ಪೀಯತೇ ।**
**ಅವ್ಯಜಾವಡವಾದೀನಾಂ ಗರ್ದಭೀನಾಂ ಚ ತತ್ಪಿಬ ॥ 65**

ಎಮ್ಮೆಯ ಹಾಲು ಕುಡಿಯಲು ಯೋಗ್ಯವಾದುದು. ಹೆಣ್ಣು ನಾಯಿಯ ಹಾಲನ್ನು ಏಕೆ ಕುಡಿಯಬಾರದು. ಆಡಿನ, ಮೇಷದ ಹೆಣ್ಣು ಕುದುರೆಯ ಹಾಲನ್ನು ಹೆಣ್ಣು ಕತ್ತೆಯ ಹಾಲನ್ನು ಏಕೆ ಕುಡಿಯಬಾರದು ಎಂದು ಆಕ್ಷೇಪಿಸಿದರೆ ಜೈನನು ಶಿಷ್ಟಾಚಾರವನ್ನು ಹೊರತುಪಡಿಸಿ ಮತ್ತ್ಯಾವ ಉತ್ತರವನ್ನು ಕೊಡಲಾರನು.

**ಸ್ಥಿರಜೀವಾನ್ ಬಹೂನ್ ಹತ್ವಾ ಭವದ್ಭಿರಪಿ ಭುಜ್ಯತೇ ।**
**ನಾನಾಶಾಕಾದಿರೂಪೇಣ ತೇಷಾಮಂಗಂ ಮನೋರಮಮ್ ॥ 66**

ಸ್ಥಿರಜೀವಿಗಳಾದ ಮುದ್ಗಮಾಷ ಮೊದಲಾದವುಗಳನ್ನು ಹಿಂಸಿಸಿ (ಕಿತ್ತು ಕುಟ್ಟಿ ಪುಡಿಮಾಡಿ) ವಿಧವಿಧವಾದ ಭೋಜ್ಯಪದಾರ್ಥಗಳನ್ನಾಗಿ ಸ್ವೀಕರಿಸುತ್ತೀರಿ; ಮತ್ತೆ ಅಜಮಾಂಸವನ್ನು ತಿನ್ನಬಾರದು ಎಂದು ನೀವೇ ಹೇಳುತ್ತೀರಿ. ಆದ್ದರಿಂದ ನಿಮ್ಮ ಮಾತಿಗೂ ಕೃತಿಗೂ ಸಾಮ್ಯವೇ ತೋರುವುದಿಲ್ಲ.

(ಮುಂದುವರಿಯುವುದು)

ಭಾವಿಸಮೀರ ಶ್ರೀಶ್ರೀ ವಾದಿರಾಜ ತೀರ್ಥಶ್ರೀಪಾದಂಗಳವರಿಂದ ರಚಿತವಾದ

## ವಿರಾಡ್ರೂಪ ಧ್ಯಾನ

ವಿ॥ ವರಾಹಹರಿ ವಿಠಲದಾಸರು

**ಮುನಿಗಳು ಕೇಳು ರಾಯ ಬಹಳ ವೈರಾಗ್ಯದಿಂದ**
**ಯುಕ್ತರಾಗಿ ಹರಿಯ ಕಥಾ ರತಿಯಲೀಹರು**
**ದ್ವಾಪರಯುಗದಲಿ ಕೃಷ್ಣಾವತಾರ ಮೊದಲು**
**ಕೃಷ್ಣದ್ವೈಪಾಯನರಿಂದ ಈ ಭಾಗವತ ಓದಿದೆ ॥ 8 ॥**

ಅನೇಕ ಋಷಿಮುನಿಗಳು ಸಂಸಾರದಲ್ಲಿ ಸುಖವಿಲ್ಲವೆಂದು ಅರಿತು ವೈರಾಗ್ಯವುಳ್ಳವರಾದರೂ ಸಹ ಭಗವಂತನ ಕಥೆಯಲ್ಲಿ ಆಸಕ್ತಿ ಹೊಂದಿ ಇಂದಿಗೂ ಪಾರಾಯಣ ಶ್ರವಣ ಮಾಡುತ್ತಿದ್ದಾರೆ. "ಹರಿಕಥಾ ಶ್ರವಣ ಮಾಡು ನಿರಂತರ" ಎಂದರು ದಾಸರು ಅದಕ್ಕಾಗಿ. ದ್ವಾಪರಯುಗದಲ್ಲಿ ಶ್ರೀ ಕೃಷ್ಣಾವತಾರಕ್ಕಿಂತ ಮುಂಚಿತವಾಗಿ ನಮ್ಮ ತಂದೆಯಾದ ವೇದವ್ಯಾಸರಿಂದ ಅಧ್ಯಯನ ಮಾಡಿದ ಭಾಗವತ ಇದು. ಅಂದರೆ ವೇದವ್ಯಾಸರು ಶ್ರೀಕೃಷ್ಣಾವತಾರಕ್ಕೆ ಮುಂಚಿತವಾಗಿಯೇ, ಪಾಂಡವರ ಕೌರವರ ಜನನಕ್ಕೆ ಮುಂಚಿತವಾಗಿಯೇ ಮಹಾಭಾರತ ರಚಿಸಿದ್ದಾರೆ ಎಂದಾಗ ಅವರ ಜ್ಞಾನವು ಎಂಥಾದ್ದು ಎಂದು ವೇದ್ಯವಾಗುತ್ತದೆ ಅಲ್ಲವೆ.

**ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।**
**ಅಧೀತವಾನ್ ದ್ವಾಪರಾದೌ ಪಿತುರ್ದ್ವೈಪಾಯನಾದಹಮ್ ॥**
**ಭಾ । 2 । 1 । 8 ॥**

**ಎಷ್ಟು ಓದಿದೆ ರಾಯ ಅಷ್ಟು ನಿನಗೆ ಹೇಳುವೆನು!**
**ಭಕ್ತಶ್ರೇಷ್ಠನೆಂದು ತಿಳಿದು ಮಹಾ ಭಕ್ತಿಯಿಂದಲಿ ।**
**ಎಂಥಾ ಶಾಸ್ತ್ರಭಕ್ತಿಯಲ್ಲಿ ಹರಿರತಿ ಹುಟ್ಟುವದು**
**ಆ ಶಾಸ್ತ್ರ ಹೇಳುವೆ ಆಲಸ್ಯವಿಲ್ಲದೆ ॥ 9 ॥**

**ಇದರಿಂದ ಕೇಳು ರಾಯ ಹರಿಯ ನಾಮ ಕೀರ್ತನೆಯು**
**ಅಂತ್ಯಕಾಲಕೆ ಸ್ಮರಣೆಗೆ ಕಾರಣೆಂತ ತಿಳಿದುಕೊ**

**ಭಕ್ತಿಪರವಶವಾದಗೆ ಶಾಸ್ತ್ರ ಜ್ಞಾನ ಬೇಕು**
**ದಿವಸಗಳು ಹತ್ತವು ದೇವಪ್ರೀಯಗೆ ॥ 10 ॥**

ವೇದವ್ಯಾಸರಿಂದ ನಾನು ಓದಿದಷ್ಟನ್ನೂ ನಿನಗೆ ಹೇಳುತ್ತೇನೆ. ನೀನು ಭಕ್ತಶ್ರೇಷ್ಠನಾಗಿದ್ದೀಯಾ, ಆಲಸ್ಯವಿಲ್ಲದೆ ಹೇಳುತ್ತೇನೆ. ಈ ಶಾಸ್ತ್ರ ಶ್ರವಣ ಮನನದಿಂದ ಅಂತ್ಯಕಾಲದಲ್ಲಿ ಹರಿಯ ಸ್ಮರಣೆ ಒದಗುತ್ತದೆ. ಯಾವ ಶಾಸ್ತ್ರದಿಂದ ಭಗವಂತನಲ್ಲಿ ಆಸಕ್ತಿ–ಭಕ್ತಿ ಹುಟ್ಟುತ್ತದೋ ಅದು ಶಾಸ್ತ್ರ. ಅಂತಹ ಶಾಸ್ತ್ರ ಶ್ರವಣಯೋಗ್ಯ. ಯಾವ ಶಾಸ್ತ್ರ ಭವಜನಿತ ದುಃಖಗಳನ್ನು ಕಳೆಯುತ್ತದೆಯೋ, ಇಹಪರಗಳಲ್ಲಿ ಸುಖವನ್ನು ತಂದು ಕೊಡುತ್ತದೆಯೋ ಅಂತಹ ಭುವನಪಾವನಗೊಳಿಪ ಲಕುಮಿ ಧವನ ಮಂಗಳಚರಿತೆಯನ್ನು ಆಲಸ್ಯವಿಲ್ಲದೆ ಆದರದಿ ಕೇಳಬೇಕು. ಮೋಕ್ಷಕ್ಕೆ, ಉಪಯೋಗವಾದ ಒಂದು ಘಳಿಗೆ ಹರಿಸ್ಮರಣೆಯು ಉತ್ತಮ, ಹರಿಸ್ಮರಣೆಯಿಲ್ಲದೆ ನೂರಾರು ವರುಷ ಬದುಕಿದ್ದರೂ ಫಲವಿಲ್ಲ.

**ಒಂದಿಷ್ಟು ಘಳಿಗೀ ಸಾಧನದಿಂದ ಹರಿಯ ತೃಪ್ತಿ**
**ಅಷ್ಟು ವೈರಾಗ್ಯದಿಂದ ಮುಕ್ತನಾಗುವ**
**ಖಟ್ವಾಂಗರಾಯನು ನಷ್ಟ ಆಯಸ್ಸು ತಿಳಿದು**
**ಎರಡು ಘಳಿಗೀ ವಿಷಯ ಬಿಟ್ಟು, ಹರಿಯನೈದಿದ ॥ 11 ॥**

**ರಾಯ ನಿನಗೆ ಸಪ್ತದಿನದ ಕ್ಲುಪ್ತ ಆಯಸ್ಸುಂಟು**
**ಮುಕ್ತಿಪಥಕೆ ಸಾಧನಾಗೋದೇನು ಮಾಡಿಕೋ ।**
**ಅಂತ್ಯಕಾಲ ತಿಳಿದು ದೇಹಾಂತಕ್ಕೆ ನೀನಂಜದೆ**
**ವೈರಾಗ್ಯಶಾಸ್ತ್ರ ವಿಷಯದಿಂದ ಹರಿಯ ಸಂಗವೈದಿಸು ॥ 12 ॥**

ಖಟ್ವಾಂಗನೆಂಬ ರಾಜ ಸಗರ ವಂಶದಲ್ಲಿ ಬಂದವನು. ಸಗರನ ಮಗ ಅಸಮಂಜಸ, ಇವನ ಮಗ ಅಂಶುಮಂತ, ಇವನ ಮಗ ದಿಲೀಪ. ಇವನಿಗೆ ಖಟ್ವಾಂಗ ಎಂದು ಕರೆಯುತ್ತಿದ್ದರು ಎಂದು ಹರಿವಂಶದಲ್ಲಿದೆ. ಒಮ್ಮೆ ದೇವತಾಪಕ್ಷ ವಹಿಸಿ ಯುದ್ಧ ಮಾಡಿದ ಖಟ್ವಾಂಗನಿಗೆ ಜಯವುಂಟಾಯಿತು. ಆಗ ದೇವತೆಗಳು ಪ್ರಸನ್ನರಾಗಿ ವರ ಕೇಳು ಎಂದಾಗ ತನ್ನ ಆಯಸ್ಸು ಎಷ್ಟಿದೆ ಎಂದು ಕೇಳಿದ. ಇನ್ನು ಒಂದೇ ಮುಹೂರ್ತ (ಸುಮಾರು 45 ನಿಮಿಷಗಳು) ಎಂದರು. ಕೂಡಲೇ ಮಗನಿಗೆ ರಾಜ್ಯಭಾರ ವಹಿಸಿ ತಾನು ವನಕ್ಕೆ ಬಂದು ಹರಿಧ್ಯಾನ ಮಾಡಿ ಮೋಕ್ಷವನ್ನು ಹೊಂದಿದ. ರಾಜ ನಿನಗೆ ಏಳು ದಿನಗಳ ಕಾಲಾವಕಾಶವಿದೆ. ಈ ಏಳು ದಿನದಲ್ಲೂ ಹರಿಸ್ಮರಣೆ ನಿರಂತರ ದೊರಕುವಂತೆ ಭಾಗವತದ ಕಥೆ ಹೇಳುತ್ತೇನೆ. ಕೇಳು.

ಅಂತ್ಯಕಾಲವೆಂದು ಭಯ ಪಡಬೇಡ. ವಿಷಯಸುಖಗಳಲ್ಲಿ ವೈರಾಗ್ಯ ತಾಳು, ಹರಿಯ ಸಂಗ ಪಡೆದುಕೋ.

**ಸನ್ಯಾಸ ಧರ್ಮದಿಂದ ಚೆನ್ನಾಗಿ ಧೀರನಾಗಿ**
**ಪುಣ್ಯಜಲದ ತೀರದಲ್ಲಿ ಪೂತ ದೇಹವು ।**
**ಏಕಾಂತದಲ್ಲಿ ಏಕಾಸನವು ನೇಮಿಸಿ**
**ಏಕಚಿತ್ತನಾಗಿ ಏಕಭಕ್ತಿಯಿಂದಲಿ ॥ 13 ॥**

**ಶ್ರವಣಜನ್ಯ ಜ್ಞಾನದಿಂದ ಶುದ್ಧವಾದ ಮನಸ್ಸನ್ನು**
**ವಿಷಯಗಳಿಗೆ ಎರಗದೇ ಇಂದ್ರಿಯ ನಿಗ್ರಹಿಸಿ ।**
**ಬಾಹ್ಯವಿಷಯದಿಂದ ಬಹು ಚಂಚಲಾದ ಮನಸ್ಸನ್ನು**
**ದೇಹವಾದರೂ ಹರಿಯ ಅಂಗದಲ್ಲಿಡಬೇಕು ॥ 14 ॥**

ವಿಷಯ ಸುಖಗಳಿಂದ ಅಂದರೆ ಹೆಂಡತಿ ಮಕ್ಕಳು ಬಂಧು ಬಾಂಧವರ ಬಂಧನದಿಂದ ದೂರವಿರುವುದೇ ಸನ್ಯಾಸ. ಅದುವೇ ವೈರಾಗ್ಯ. ಹೊರಗಿನ ಮಲವನ್ನು ತೊಳೆಯುವ ಗಂಗಾಸನ್ನಿಧಾನದಲ್ಲಿದ್ದೀಯೆ. ಒಳಗಿನ ಮಲಿನವನ್ನು ಕಳೆಯುವ ಗಂಗಾಜನಕನಕಥೆಯನ್ನು ಕೇಳು. ದೇಹವೂ ಪವಿತ್ರವಾಗುತ್ತದೆ. ಪೂತಾತ್ಮ ನೆಂದೆನೆಸುತ್ತೀಯಾ. ಏಕಾಂತದಲ್ಲಿ ಶ್ರೀಕಾಂತನನ್ನು ಸ್ಮರಿಸು. ಏಕಾಸನ ಅಂದರೆ ಪದ್ಮಾಸನ ಸ್ವಸ್ತಿಕಾಸನದಲ್ಲಿ ಕುಳಿತುಕೋ. ಏಕಚಿತ್ತದಿಂದ ಬಾಹ್ಯ ವಿಚಾರಗಳಿಂದ ಚಂಚಲವಾದ ಮನಸ್ಸನ್ನು ಶಾಸ್ತ್ರಶ್ರವಣದಿಂದ ಹುಟ್ಟುವ ಜ್ಞಾನ ಪರಿಶುದ್ಧಗೊಳಿಸುತ್ತದೆ. ಇಂದ್ರಿಯ ನಿಗ್ರಹಿಸಿ ಮನಸ್ಸನ್ನು ವಿಷಯಸುಖಗಳಿಂದ ದೂರವಿರಿಸುತ್ತದೆ. ಹರಿಯ ಅಂಗಗಳನ್ನು ಚಿಂತಿಸುವುದೇ ಧ್ಯಾನ. ಹೀಗೆ, ಚಿಂತಿಸುವಾಗ ಬಾಹ್ಯ ವಿಷಯಗಳಿಂದ ಚಂಚಲ ಮನಸ್ಸು ಒಂದು ಕಡೆ ಸ್ಥಿರವಾಗುತ್ತದೆ.

(ಮುಂದುವರಿಯುವುದು)

# ಶ್ರೀರಘುವರ್ಯತೀರ್ಥರ ಸುಭಾಷಿತಮಂಡಲ

**ಡಾ. ಗುರುರಾಜ ಕೃ. ನಿಪ್ಪಾಣಿ**
ದೂ. 9480179468

**ಪ್ರಭೋರೈಶ್ವರ್ಯಮತ್ತಸ್ಯ ಪ್ರಾಯಃ ಸರ್ವತ್ರ ವಿಸ್ಮೃತಿಃ ।**
**ಶಕುಂತಲಾಯಾಮಿಷ್ಟಾಯಾಂ ದುಷ್ಯಂತಸ್ಯ ಯಥಾಽಭವತ್ ॥ 43 ॥**

ಅತಿಶಯ ಐಶ್ವರ್ಯದಿಂದ ಮತ್ತನಾದ ರಾಜನಿಗೆ (ಶ್ರೀಮಂತವ್ಯಕ್ತಿಗೆ) ಸಾಮಾನ್ಯವಾಗಿ ಎಲ್ಲೆಡೆ – ಎಲ್ಲ ಕಾಲದಲ್ಲಿ ವಿಸ್ಮರಣೆಯು ಸ್ವಾಭಾವಿಕ. ಇಷ್ಟಪಟ್ಟು ಪ್ರೀತಿಸಿದ ಶಕುಂತಲೆಯ ವಿಷಯದಲ್ಲಿ ರಾಜ್ಯೈಶ್ವರ್ಯ ಸಂಪನ್ನನಾದ (ಮತ್ತನಾದ) ದುಷ್ಯಂತನಿಗೆ ವಿಸ್ಮರಣೆಯುಂಟಾಯಿತು.

ದುಷ್ಯಂತ ಪೂರುವಂಶದಲ್ಲಿ ಬಂದ ಸುಮತಿಯ ಪುತ್ರನಾದ ರೈಭ್ಯನ ಮಗ. ಒಮ್ಮೆ ಭೇಟೆಯಾಡುತ್ತ ಆಯಾಸಗೊಂಡು ಕಣ್ವಮುನಿಗಳ ಆಶ್ರಮ ಪ್ರವೇಶಿಸಿದ. ಅಲ್ಲಿ ವಿಶ್ವಾಮಿತ್ರ–ಮೇನಕೆಯರ ಮಗಳಾದ ಶಕುಂತಲೆಯನ್ನು ಕಂಡ. ಅವಳಲ್ಲಿ ಅನುರಾಗ ಮೂಡಿತು. ಶಕುಂತಲೆಯೂ ತನ್ನ ಹಾರ್ದವನ್ನು ಸೂಚ್ಯವಾಗಿ ತಿಳಿಸಿದಳು. ಕಣ್ವರ ಅನುಪಸ್ಥಿತಿಯಲ್ಲಿ ಉಭಯರೂ ಗಾಂಧರ್ವವಿಧಿಯಿಂದ ವಿವಾಹವಾದರು. ಮರುದಿನ ದುಷ್ಯಂತ ಶಕುಂತಲೆಗೆ ಭರವಸೆ ಇತ್ತು ರಾಜಧಾನಿಗೆ ಹಿಂತಿರುಗಿದ. ಇತ್ತ ಶಕುಂತಲೆ ಭರತನಿಗೆ ಜನ್ಮವಿತ್ತಳು. ಶ್ರೀಹರಿಯ ಆವೇಶದಿಂದ ಭರತ ಮಹಾಪರಾಕ್ರಮಿಯಾಗಿ ಬೆಳೆದ. ಆಗೊಮ್ಮೆ ಶಕುಂತಲೆ ಭರತನೊಂದಿಗೆ ದುಷ್ಯಂತನ ಬಳಿಗೆ ಬಂದಾಗ ಹಿಂದಿನ ಘಟನೆಯ ವಿಸ್ಮೃತಿಯಿಂದಾಗಿ ಸ್ವೀಕರಿಸಲು ನಿರಾಕರಿಸಿದ. ನಂತರ ಅಶರೀರವಾಣಿಯಿಂದಾಗಿ ಈರ್ವರನ್ನು ಸ್ವೀಕರಿಸಿದ.

ಐಶ್ವರ್ಯದ ಮದ ಅನೇಕ ಸತ್ಯಸಂಗತಿಗಳ ವಿಸ್ಮೃತಿಗೆ ಕಾರಣ. ದುಷ್ಯಂತನ ಸಾಮ್ರಾಜ್ಯಾದಿಪತ್ಯದ್ಯೋತಕ ಐಶ್ವರ್ಯವು ಶಕುಂತಲಾಸಂಬಂಧಿ ವಿಸ್ಮೃತಿಗೆ ಕಾರಣವಾಯಿತು.

**ಬಲವತ್ತ್ಯಾಲಸಂಬಂಧಾತ್ ನಷ್ಟಾನಿಷ್ಟೋ ಭವೇತ್ಪುಮಾನ್ ।**
**ಸರ್ಪಾರಯೋ ಯಥಾ ನಷ್ಟಾ ಗಂಧರ್ವಾಃ ಪುರುಕುತ್ಸತಃ ॥ 44 ॥**

ಬಲಿಷ್ಠನಾದ ಭಾವನ (ಅಕ್ಕ–ತಂಗಿಯರ ಪತಿ) ಸಂಬಂಧನಿಮಿತ್ತದಿಂದ ಮನುಷ್ಯನು ನಷ್ಟವನ್ನು ಹಾಗೂ ಅನಿಷ್ಟವನ್ನು ಹೊಂದುತ್ತಾನೆ. ಪುರುಕುತ್ಸ ರಾಜನ ದೆಸೆಯಿಂದ ಸರ್ಪ ವೈರಿಗಳಾದ ಗಂಧರ್ವರು ನಾಶ ಹೊಂದಿದರು.

ಪುರುಕುತ್ಸ ಮಾಂಧಾತರಾಜನ ಮಗ. ಮಾಂಧಾತ ರಾಜನಿಗೆ ಪುರುಕುತ್ಸ, ಅಂಬರೀಷ ಹಾಗೂ ಮುಚುಕುಂದ ಎಂಬುದಾಗಿ ಮೂವರು ಗಂಡುಮಕ್ಕಳು ಹಾಗು ಐವತ್ತು ಕನ್ಯೆಯರು. ಈ ಐವತ್ತು ಕನ್ಯೆಯರನ್ನು ಸೌಭರಿಋಷಿಗಳು ವಿವಾಹವಾದರು. ಪುರುಕುತ್ಸ ನರ್ಮದೆ ಎಂಬ ನಾಗಕನ್ಯೆಯನ್ನು ವಿವಾಹವಾದ. ನಾಗರಿಗೆ ರಸಾತಲದಲ್ಲಿದ್ದ ವಧ್ರಶ್ವರೆಂಬ ಗಂಧರ್ವರು ಶತ್ರುಗಳಾಗಿದ್ದರು. ಸರ್ಪವೈರಿಗಳಾಗಿದ್ದ ಅವರು ಮಹಾಬಲಿಷ್ಠರಾಗಿದ್ದರು.. ನಾಗರಿಗೆ ಅವರ ಪೀಡೆಯನ್ನು ಸಹಿಸಲು ಆಗಲಿಲ್ಲ. ಆ ನಾಗರ ರಕ್ಷಣೆಗಾಗಿ ಅವರ ಭಾವನಾದ ಪುರುಕುತ್ಸನು ಮುಂದಾಗಿ ಆ ಗಂಧರ್ವರನ್ನು ಸಂಹರಿಸಿದನು.

ರಸಾತಲದಲ್ಲಿದ್ದ ಗಂಧರ್ವರು ತನ್ನ ಪತ್ನಿಯ ಬಂಧುಗಳಿಗೆ ವೈರಿಗಳಾಗಿದ್ದಾರೆನ್ನುವ ಅಂಶವೇ ಇಲ್ಲಿ ಪ್ರಧಾನವಾಗಿ ಎದ್ದು ಕಾಣುತ್ತದೆ. ಆದ್ದರಿಂದ, ಬಲಿಷ್ಠನಾದ ಪುರುಕುತ್ಸನು ಈ ನಿಮಿತ್ತವನ್ನೇ ಮುಂದುಮಾಡಿ ಸರ್ಪವೈರಿಗಳಾದ ಗಂಧರ್ವರನ್ನು ಸಂಹರಿಸಿದ. ಬಂಧುತ್ವ, ಸಂಬಂಧವು ನಷ್ಟ–ಅನಿಷ್ಟಗಳಿಗೆ ಕಾರಣವಾಗಬಹುದು.

**ಸಕೃತ್‌ಸ್ನಾತ್ವಾ ಮೀನಸಂಸ್ಥೇ ಸೂರ್ಯೇ ಪ್ರಾತಃ ಕೃತಾಹ್ನಿಕಃ ।**
**ಮಹಾಪಾಪವಿನಿರ್ಮುಕ್ತೋ ವಿಷ್ಣೋಃ ಸಾಯುಜ್ಯಮಾಪ್ನುಯಾತ್ ॥**

ಸೂರ್ಯನು ಮೀನರಾಶಿಯಲ್ಲಿರುವ ಚೈತ್ರಮಾಸದಲ್ಲಿ ಒಂದು ದಿನವಾದರೂ ಪ್ರಾತಃಸ್ನಾನಮಾಡಿ ಆಹ್ನಿಕ ಕರ್ಮಗಳನ್ನು ಮಾಡುವವರು ಮಹಾಪಾಪಗಳಿಂದ ಮುಕ್ತರಾಗಿ ವಿಷ್ಣುವಿನ ಸಾಯುಜ್ಯ ಪದವಿಯನ್ನು ಹೊಂದುವರು.

**– ಭವಿಷ್ಯೋತ್ತರಪುರಾಣ**

## 01–07–2023ರಿಂದ 30–09–2023ರ ವರೆಗೆ ಬರುವ ವಿಶೇಷ ದಿನಗಳು

| ಕ್ರ.ಸಂ. | ದಿನಾಂಕ | ಮಾಸ, ಪಕ್ಷ – ತಿಥಿ | ವಿಶೇಷದಿನ – ವಿವರಣೆ |
|---|---|---|---|
| 01 | 01–07–2023 | ಆಷಾಢ ಶುಕ್ಲ ತ್ರಯೋದಶೀ | ಶನಿಪ್ರದೋಷ |
| 02 | 03–07–2023 | ಆಷಾಢ ಶುಕ್ಲ ಪೂರ್ಣಿಮಾ | ಯತಿಚಾತುರ್ಮಾಸ್ಯಾರಂಭ, ಮನ್ವಾದಿ, ಚಾತುರ್ಮಾಸ್ಯ ಸಂಕಲ್ಪ, ಸೋದಾಮತೇ ಸರ್ವ ಶಾಕಸಮರ್ಪಣಮ್ |
| 03 | 06–07–2023 | ಆಷಾಢ ಕೃಷ್ಣ ತೃತೀಯಾ | ಪ್ರದೋಷ |
| 04 | 07–07–2023 | ಆಷಾಢ ಕೃಷ್ಣ ಚತುರ್ಥೀ | ಶ್ರೀಟೀಕಾಚಾರ್ಯರ ಆರಾಧನೆ |
| 05 | 13–07–2023 | ಆಷಾಢ ಕೃಷ್ಣ ಏಕಾದಶೀ | ಉಪವಾಸ, ಕಾಮದಾ |
| 06 | 14–07–2023 | ಆಷಾಢ ಕೃಷ್ಣ ದ್ವಾದಶೀ | ಪಾರಣ, ಉದಯಾತ್ಪೂರ್ವ ಹರಿವಾಸರ 4 ಗಂ. 16 ನಿ. ವರೆಗೆ, ಪ್ರದೋಷ |
| 07 | 15–07–2023 | ಆಷಾಢ ಕೃಷ್ಣ ತ್ರಯೋದಶೀ | ಶನಿಪ್ರದೋಷ |
| 08 | 17–07–2023 | ಆಷಾಢ ಕೃಷ್ಣ ಅಮಾವಾಸ್ಯಾ | ದೀವಿಗೆ ಅಮಾವಾಸ್ಯಾ, ಸೋಮವತೀ, ಕರ್ಕಾಟಕ ಸಂಕ್ರಮಣಂ, (16.49), ದಕ್ಷಿಣಾಯಣಾರಂಭ, ಶ್ರೀವೃಂದಾವನಾಚಾರ್ಯರ ಆರಾಧನೆ (ಉಡುಪಿ) ಶ್ರೀವಿಶ್ವಾಧೀಶತೀರ್ಥರ ಆರಾಧನೆ (ಉಡುಪಿ) |
| 09 | 18–07–2023 | ಅಧಿಕಶ್ರಾವಣ ಶುಕ್ಲ ಪ್ರತಿಪತ್ | ಅಪೂಪದಾನಾರಂಭ |
| 10 | 20–07–2023 | ಅಧಿಕಶ್ರಾವಣ ಶುಕ್ಲ ತೃತೀಯಾ | ಪುಷ್ಯಾರ್ಕಃ |
| 11 | 21–07–2023 | ಅಧಿಕಶ್ರಾವಣ ಶುಕ್ಲ ತೃತೀಯಾ | ಪ್ರದೋಷ |
| 12 | 24–07–2023 | ಅಧಿಕಶ್ರಾವಣ ಶುಕ್ಲ ಷಷ್ಠೀ | ಪ್ರದೋಷ |
| 13 | 25–07–2023 | ಅಧಿಕಶ್ರಾವಣ ಶುಕ್ಲ ಸಪ್ತಮೀ | ಶಿರೂರು ಶ್ರೀಲಕ್ಷ್ಮೀವರತೀರ್ಥರ ಆರಾಧನೆ |
| 14 | 29–07–2023 | ಅಧಿಕಶ್ರಾವಣ ಶುಕ್ಲ ಏಕಾದಶೀ | ಉಪವಾಸ (ಪದ್ಮಿನೀ) |
| 15 | 30–07–2023 | ಅಧಿಕಶ್ರಾವಣ ಶುಕ್ಲ ದ್ವಾದಶೀ | ಪಾರಣ, ಪ್ರದೋಷ |
| 16 | 01–08–2023 | ಅಧಿಕಶ್ರಾವಣ ಶುಕ್ಲಪೂರ್ಣಿಮಾ | ಹೊಸ್ತಿಲು ಹುಣ್ಣಿಮೆ |
| 17 | 04–08–2023 | ಅಧಿಕಶ್ರಾವಣ ಕೃಷ್ಣ ತೃತೀಯಾ | ಪ್ರದೋಷ |
| 18 | 07–08–2023 | ಅಧಿಕಶ್ರಾವಣ ಕೃಷ್ಣ ಷಷ್ಠೀ | ಪ್ರದೋಷ |
| 19 | 12–08–2023 | ಅಧಿಕಶ್ರಾವಣ ಕೃಷ್ಣ ಏಕಾದಶೀ | ಉಪವಾಸ (ಪರಮಾ) |
| 20 | 13–08–2023 | ಅಧಿಕಶ್ರಾವಣ ಕೃಷ್ಣ ದ್ವಾದಶೀ | ಪಾರಣ, ಪ್ರದೋಷ, ಶ್ರೀಪುತ್ತಿಗೆ ಸ್ವಾಮಿಗಳವರ ಗುರುಸಮಾರಾಧನೆ |
| 21 | 14–08–2023 | ಅಧಿಕಶ್ರಾವಣ ಕೃಷ್ಣತ್ರಯೋದಶೀ | ಪ್ರದೋಷ |
| 22 | 15–08–2023 | ಅಧಿಕಶ್ರಾವಣ ಕೃಷ್ಣ ಚತುರ್ದಶೀ | ಕೃಷ್ಣಾಂಗಾರಕ ಚತುರ್ದಶೀ, ಸುವರ್ಣಾನದೀ ಸ್ನಾನವಿಶೇಷ |
| 23 | 16–08–2023 | ಅಧಿಕಶ್ರಾವಣ ಕೃಷ್ಣ ಅಮಾವಾಸ್ಯಾ | |
| 24 | 17–08–2023 | ನಿಜಶ್ರಾವಣ ಶುಕ್ಲ ಪ್ರತಿಪತ್ | ಸಿಂಹಸಂಕ್ರಮಣಂ |
| 25 | 18–08–2023 | ನಿಜಶ್ರಾವಣ ಶುಕ್ಲ ದ್ವಿತೀಯಾ | ಸಂಪತ್ ಶುಕ್ರವಾರ |
| 26 | 19–08–2023 | ನಿಜಶ್ರಾವಣ ಶುಕ್ಲ ತೃತೀಯಾ | ಪ್ರದೋಷ |

| | | | |
|---|---|---|---|
| 27 | 20–08–2023 | ನಿಜಶ್ರಾವಣ ಶುಕ್ಲ ಚತುರ್ಥೀ | ಪ್ರದೋಷ, ಸಾಮೋಪಾಕರ್ಮ, ನಾಗಚತುರ್ಥೀ |
| 28 | 21–08–2023 | ನಿಜಶ್ರಾವಣ ಶುಕ್ಲ ಪಂಚಮೀ | ನಾಗಪಂಚಮಿ |
| 29 | 22–08–2023 | ನಿಜಶ್ರಾವಣ ಶುಕ್ಲ ಷಷ್ಠೀ | ಮಂಗಳಗೌರೀವ್ರತ, ಶ್ರೀಸೋದೆಸ್ವಾಮಿಗಳವರ ಗುರುಸಮಾರಾಧನೆ |
| 30 | 23–08–2023 | ನಿಜಶ್ರಾವಣ ಶುಕ್ಲ ಸಪ್ತಮೀ | ಪ್ರದೋಷ |
| 31 | 25–08–2023 | ನಿಜಶ್ರಾವಣ ಶುಕ್ಲ ನವಮೀ | ವರಮಹಾಲಕ್ಷ್ಮೀ ವ್ರತ |
| 32 | 27–08–2023 | ನಿಜಶ್ರಾವಣ ಶುಕ್ಲ ಏಕಾದಶೀ | ಉಪವಾಸ, ಪವಿತ್ರಾ |
| 33 | 28–08–2023 | ನಿಜಶ್ರಾವಣ ಶುಕ್ಲ ದ್ವಾದಶೀ | ಪಾರಣ, ದಧಿವ್ರತಾರಂಭ, ಸೋಮಪ್ರದೋಷ |
| 34 | 29–08–2023 | ನಿಜಶ್ರಾವಣ ಶುಕ್ಲ ತ್ರಯೋದಶೀ | ಸರ್ವಋಗುಪಾಕರ್ಮ, ಮಂಗಳಗೌರೀವ್ರತ |
| 35 | 31–08–2023 | ನಿಜಶ್ರಾವಣ ಶುಕ್ಲ ಪೂರ್ಣಿಮಾ | ಶ್ರೀಹಯಗ್ರೀವ ಜಯಂತೀ, ಪವಿತ್ರಾರೋಪಣಂ, ಯಜುರುಪಾಕರ್ಮ, ಸಮುದ್ರಪೂಜಾ, ರಕ್ಷಾಬಂಧನ |
| 36 | 01–09–2023 | ನಿಜಶ್ರಾವಣ ಕೃಷ್ಣ ಪ್ರತಿಪತ್ | ಶ್ರೀರಾಘವೇಂದ್ರ ಸ್ವಾಮಿಗಳವರ ಆರಾಧನೆ |
| 37 | 05–09–2023 | ನಿಜಶ್ರಾವಣ ಕೃಷ್ಣ ಷಷ್ಠೀ | ಮಂಗಳಗೌರೀವ್ರತ |
| 38 | 06–09–2023 | ನಿಜಶ್ರಾವಣ ಕೃಷ್ಣ ಸಪ್ತಮೀ | ಶ್ರೀಕೃಷ್ಣಜಯಂತೀ, ಚಂದ್ರೋದಯ ರಾತ್ರಿ 11.42 |
| 39 | 07–09–2023 | ನಿಜಶ್ರಾವಣ ಕೃಷ್ಣ ಅಷ್ಟಮೀ | ವಿಟ್ಲಪಿಂಡಿ, ಉಡುಪಿ ಶ್ರೀಕೃಷ್ಣಲೀಲೋತ್ಸವ |
| 40 | 10–09–2023 | ನಿಜಶ್ರಾವಣ ಕೃಷ್ಣ ಏಕಾದಶೀ | ಉಪವಾಸ ಅಜಾ |
| 41 | 11–09–2023 | ನಿಜಶ್ರಾವಣ ಕೃಷ್ಣ ದ್ವಾದಶೀ | ಪಾರಣ, ಹರಿವಾಸ (ಬೆಳಿಗ್ಗೆ 7 ಗಂ 31 ನಿ. ವರೆಗೆ) |
| 42 | 12–09–2023 | ನಿಜಶ್ರಾವಣ ಕೃಷ್ಣ ತ್ರಯೋದಶೀ | ಮಂಗಳಗೌರೀವ್ರತ, ಪ್ರದೋಷ, ಶ್ರೀಸತ್ಯಧರ್ಮತೀರ್ಥರ ಆರಾಧನೆ, ಶ್ರೀಜಂಬುಖಂಡಿ ವಾದಿರಾಜಾಚಾರ್ಯರ ಪುಣ್ಯದಿನ |
| 43 | 15–09–2023 | ನಿಜಶ್ರಾವಣ ಕೃಷ್ಣ ಅಮಾವಾಸ್ಯಾ | ಭಾದ್ರಪದ ಶುಕ್ಲ ಪ್ರತಿಪತ್, ಶ್ರೀರಘುಪ್ರೇಮತೀರ್ಥರ ಆರಾಧನೆ (ಆದೋನಿ) |
| 44 | 17–09–2023 | ಭಾದ್ರಪದ ಶುಕ್ಲ ದ್ವಿತೀಯಾ | ಕನ್ಯಾಸಂಕ್ರಮಣಂ |
| 45 | 18–09–2023 | ಭಾದ್ರಪದ ಶುಕ್ಲ ತೃತೀಯಾ | ಗೌರೀತೃತೀಯಾ |
| 46 | 19–09–2023 | ಭಾದ್ರಪದ ಶುಕ್ಲ ಚತುರ್ಥೀ | ಗಣೇಶಚತುರ್ಥೀ |
| 47 | 20–09–2023 | ಭಾದ್ರಪದ ಶುಕ್ಲ ಪಂಚಮೀ | ಋಷಿಪಂಚಮೀ, ಭೂವರಾಹಜಯಂತೀ |
| 48 | 21–09–2023 | ಭಾದ್ರಪದ ಶುಕ್ಲ ಷಷ್ಠೀ | ಪ್ರದೋಷ |
| 49 | 23–09–2023 | ಭಾದ್ರಪದ ಶುಕ್ಲ ಅಷ್ಟಮೀ | ಶ್ರೀಜಗನ್ನಾಥದಾಸರ ಆರಾಧನೆ |
| 50 | 25–09–2023 | ಭಾದ್ರಪದ ಶುಕ್ಲ ಏಕಾದಶೀ | ದಶಮ್ಯನುಷ್ಠಾನ, ರಾತ್ರಿ 9.12ರಿಂದ ಹರಿವಾಸರ |
| 51 | 26–09–2023 | ಭಾದ್ರಪದ ಶುಕ್ಲ ದ್ವಾದಶೀ | ಏಕಾದಶೀ ಉಪವಾಸ – ಪದ್ಮಾ, ವಾಮನಜಯಂತೀ |
| 52 | 27–09–2023 | ಭಾದ್ರಪದ ಶುಕ್ಲ ತ್ರಯೋದಶೀ | ಪಾರಣ, ಕ್ಷೀರವ್ರತಾರಂಭ, ಪ್ರದೋಷ |
| 53 | 28–09–2023 | ಭಾದ್ರಪದ ಶುಕ್ಲ ಚತುರ್ದಶೀ | ಅನಂತ ಚತುರ್ದಶೀ |
| 54 | 29–09–2023 | ಭಾದ್ರಪದ ಶುಕ್ಲ ಪೂರ್ಣಿಮಾ | |
| 55 | 30–09–2023 | ಭಾದ್ರಪದ ಕೃಷ್ಣ ಪ್ರತಿಪತ್ | ಮಹಾಲಯಾರಂಭ |